ಅಕ್ಷಾಂಶ–16°–00°

ಅಯನಾಂಶ–24°–00" 03



ಶ್ರೀಮಧ್ವಾಚಾರ್ಯರು

ಕಲ್ಪಾದಿಗತವರ್ಷಗಳು
1972949123
ಸೃಷ್ಟ್ಯಾದಿಗತವರ್ಷಗಳು
1955885123
ಆರ್ಯಗತಾಬ್ದ: 3245123
ಕಲ್ಯಾದಿಗತಾಬ್ದ: 5123



ವಿಕ್ರಮಶಕೆ
2079–80
ಶ್ರೀಮಧ್ವಾಚಾರ್ಯ ಶಕಾಬ್ದ 822
ಶ್ರೀರಘುನಂದನ ಶಕಾಬ್ದ 519
ಶ್ರೀಗುರುರಾಘವೇಂದ್ರ ಶಕಾಬ್ದ 352



ಶ್ರೀಮಟ್ಟೀಕಾಕೃತ್ಪಾದರು




ಶ್ರೀರಾಘವೇಂದ್ರತೀರ್ಥರು

ಶ್ರೀಹಂಸನಾಮಕಪರಮಾತ್ಮನ ಸಾಕ್ಷಾತ್ಪರಂಪರೆಯಾದ ಜಗದ್ಗುರು ಶ್ರೀಮನ್ಮಧ್ವಾಚಾರ್ಯರ ಮೂಲಮಹಾಸಂಸ್ಥಾನ

ಶ್ರೀರಾಘವೇಂದ್ರಸ್ವಾಮಿಗಳವರ ಮಠ ವಿದ್ಯಾಮಠ ಮಂತ್ರಾಲಯ

ಶ್ರೀ ಶುಭಕೃತ್ ನಾಮ ಸಂವತ್ಸರ ಸೂರ್ಯಸಿದ್ಧಾಂತ ಪಂಚಾಂಗ

ಜಗದ್ಗುರು ಶ್ರೀಮನ್ಮಧ್ವಾಚಾರ್ಯರ ಮೂಲಮಹಾಸಂಸ್ಥಾನಾಧೀಶ್ವರ ಶ್ರೀರಾಘವೇಂದ್ರಸ್ವಾಮಿಗಳವರ ಮಠದ ದಿಗ್ವಿಜಯ ವಿದ್ಯಾಸಿಂಹಾಸನಾಧೀಶ್ವರರಾದ ಶ್ರೀಶ್ರೀಸುಬುಧೇಂದ್ರತೀರ್ಥಶ್ರೀಪಾದಂಗಳವರ ಆಜ್ಞಾನುಸಾರವಾಗಿ ವಿದ್ವತ್ಸಭೆಯಲ್ಲಿ ವಿಮರ್ಶಿಸಿ ಪ್ರಕಟಿತವಾಗಿದೆ.



ಶ್ರೀವಾದೀಂದ್ರತೀರ್ಥರು

ಶ್ರೀಗತಶಕೆ 1944 | ಪಲಭಾ 3–27 | 2022–2023



ಶ್ರೀಸುಧರ್ಮೇಂದ್ರತೀರ್ಥರು



ಶ್ರೀಸುವ್ರತೀಂದ್ರತೀರ್ಥರು



ಶ್ರೀಸುಯಮೀಂದ್ರತೀರ್ಥರು



ಶ್ರೀಸುಜಯೀಂದ್ರತೀರ್ಥರು



ಶ್ರೀಸುಶಮೀಂದ್ರತೀರ್ಥರು



ಶ್ರೀಸುಯತೀಂದ್ರತೀರ್ಥರು



ಆನೇಗುಂದಿ ನವವೃಂದಾವನಗಡ್ಡೆಯಲ್ಲಿ ಶ್ರೀಪದ್ಮನಾಭತೀರ್ಥರ ಆರಾಧನಾ ಮಹೋತ್ಸವದ ವೈಭವದಲ್ಲಿ ಪರಮಪೂಜ್ಯ ಶ್ರೀಶ್ರೀಸುಬುಧೇಂದ್ರತೀರ್ಥಶ್ರೀಪಾದಂಗಳವರು.

ಆನೆಗುಂದಿ ನವವೃಂದಾವನಗಡ್ಡೆಯಲ್ಲಿ ಶ್ರೀರಾಘವೇಂದ್ರಸ್ವಾಮಿಗಳ ಮಠದಿಂದ ಇದೇ ಶ್ರೀ ಪ್ಲವ ನಾಮ ಸಂವತ್ಸರದ ಕಾರ್ತೀಕ ಬ।। ಚತುರ್ದಶಿ, ಅಮಾವಾಸ್ಯೆ ದಿನಾಂಕ 03, 04-12-2021 ವೈಭವದಿಂದ ಆಚರಿಸಲ್ಪಟ್ಟ ಶ್ರೀಪದ್ಮನಾಭತೀರ್ಥರ ಆರಾಧನಾ ಮಹೋತ್ಸವದ ವಿವರ

ಶ್ರೀಹಂಸನಾಮಕ ಪರಮಾತ್ಮನಿಂದ ಸಾಕ್ಷಾತ್ತಾಗಿ ಪ್ರಾರಂಭವಾಗಿರುವ ಸದ್ವೈಷ್ಣವ ಸಂಪ್ರದಾಯದ ಪರಂಪರೆಯಲ್ಲಿ ಬಂದಿರುವ ಜಗದ್ಗುರು ಶ್ರೀಮನ್ಮಧ್ವಾಚಾರ್ಯರ ಮೂಲಮಹಾಸಂಸ್ಥಾನವೆಂದೂ ಶ್ರೀಪದ್ಮನಾಭತೀರ್ಥರೂ, ಶ್ರೀಜಯತೀರ್ಥರೂ, ಶ್ರೀವಿಬುಧೇಂದ್ರತೀರ್ಥರೂ ಇವರೇ ಮೊದಲಾದವರ ಭವ್ಯಪರಂಪರೆಯುಳ್ಳ, ಶ್ರೀಬ್ರಹ್ಮ ದೇವ ಕರಾರ್ಚಿತ ಚತುರ್ಯುಗಮೂರ್ತಿಯಾದ ಶ್ರೀಮನ್ಮೂಲರಘುಪತಿ ವೇದವ್ಯಾಸರ ನಿತ್ಯಪೂಜಾವೈಭವದ ವೈಖರಿಯಿಂದ ಜಗನ್ಮಾನ್ಯವಾದ ಶ್ರೀಮದ್ರಾಘವೇಂದ್ರಸ್ವಾಮಿಗಳವರ ಮಠ-ವಿದ್ಯಾಮಠವೆಂದೂ ಪ್ರಸಿದ್ಧವಾಗಿರುವ ಶ್ರೀಮಠದ ಪೀಠಾಧಿಪತಿಗಳಾದ **ಶ್ರೀ 1008 ಶ್ರೀಸುಬುಧೇಂದ್ರತೀರ್ಥಶ್ರೀಪಾದಂಗಳವರು** ಶ್ರೀಮಠದ ಶಿಷ್ಯರುಗಳಿಂದ ಕೂಡಿಕೊಂಡು ಪ್ರತಿವರ್ಷದ ಶ್ರೀಮಠದ ಪದ್ಧತಿಯಂತೆ ಶ್ರೀಪ್ಲವ ನಾಮ ಸಂವತ್ಸರ ಕಾರ್ತೀಕ ಬಹುಳ ಚತುರ್ದಶಿ, ಅಮಾವಾಸ್ಯ ಈ ಎರಡು ದಿನಗಳಲ್ಲಿ ಶ್ರೀಮಠದ ಪೂರ್ವೀಕರಾದ ಶ್ರೀಪದ್ಮನಾಭತೀರ್ಥರ ಆರಾಧನೆಯನ್ನು ಅತಿವೈಭವದಿಂದ ನೆರವೇರಿಸಿದರು. ದೇಶದ ನಾನಾಭಾಗಗಳಿಂದ ಶ್ರೀಮಠದ ಶಿಷ್ಯರು ಆರಾಧನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಶ್ರೀಮಠದ ಪದ್ಧತಿಯಂತೆ ಶ್ರೀಪಾದಂಗಳವರು ಶ್ರೀಮೂಲರಾಮ ಪೂಜೆ, ನೈವೇದ್ಯಾದಿಗಳನ್ನು ವೈಭವದಿಂದ ನೆರವೇರಿಸಿ ನಂತರ ಶ್ರೀಪದ್ಮನಾಭತೀರ್ಥರೇ ಮೊದಲಾದ ಎಲ್ಲ ಗುರುಗಳಿಗೂ ಹಸ್ತೋದಕವನ್ನು ಕೊಟ್ಟು, ಮಹಾಮಂಗಳಾರತಿ ಮಾಡಿದರು. ತಮ್ಮ ಪೂರ್ವೀಕರಾದ ಶ್ರೀಪದ್ಮನಾಭತೀರ್ಥರ ಆರಾಧನೆಯ ಸಲುವಾಗಿ ತರಿಸಲಾಗಿದ್ದ ರಜತಪಾತ್ರೆಗಳು ಮತ್ತು ಧೋತ್ರಗಳ ವಿತರಣೆಯೊಂದಿಗೆ ಮೂಲಮಹಾ ಸಂಸ್ಥಾನದ ಅವಿಚ್ಛಿನ್ನ ಪದ್ಧತಿಯಂತೆ ಅಲಂಕಾರ ಬ್ರಾಹ್ಮಣ ಸಂತರ್ಪಣೆಯನ್ನು ವಿಶೇಷ ವೈಭವದಿಂದ ನಡೆಸಿದರು. ಶ್ರೀಪದ್ಮನಾಭತೀರ್ಥರಿಂದ ರಚಿತವಾದ ಸತ್ತರ್ಕದೀಪಾವಲೀ ಹಾಗೂ ಸನ್ನ್ಯಾಯರತ್ನಾವಲೀ ಗ್ರಂಥಗಳ ಪ್ರವಚನ ಮಹೋತ್ಸವವು ಶ್ರೀಮಠದ ವಿದ್ವಾಂಸರಿಂದ ನಡೆಯಿತು. ಶ್ರೀಮಠದ ಆಸ್ಥಾನ ಪಂಡಿತರುಗಳಿಂದ ವಾಕ್ಯಾರ್ಥ ವಿಚಾರಗಳು ಹಾಗೂ ಉಪನ್ಯಾಸಗಳು ವೈಭವದಿಂದ ನಡೆದವು.

ಈ ರೀತಿಯಾಗಿ ಮೇಲೆ ಕಾಣಿಸಿದ ದಿನಗಳಲ್ಲಿ ಶ್ರೀಮಠದ ಪರವಾಗಿ ಶ್ರೀಪದ್ಮನಾಭತೀರ್ಥರ ಆರಾಧನೆಯು ಅತಿವೈಭವದಿಂದ ಜರುಗಿತೆಂದು ತಿಳಿಸಲು ಹರ್ಷವಾಗುತ್ತದೆ.

ಮ್ಯಾನೇಜರ್: ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ

ಪ್ರಾತಃಸಂಕಲ್ಪಗದ್ಯಮ್

ಓಂ... ಲೌಕಿಕವೈದಿಕಭೇದಭಿನ್ನವರ್ಣಾತ್ಮಕಧ್ವನ್ಯಾತ್ಮಕಾಶೇಷಶಬ್ದಾರ್ಥ ಋಗಾದಿಸರ್ವವೇದಾರ್ಥ–
ವಿಷ್ಣುಮಂತ್ರಾರ್ಥಪುರುಷಸೂಕ್ತಾರ್ಥಗಾಯತ್ರ್ಯರ್ಥ ವಾಸುದೇವದ್ವಾದಶಾಕ್ಷರಮಂತ್ರಾಂತರ್ಗತಾದ್ಯಾಷ್ಟಾಕ್ಷರಾರ್ಥ
ಶ್ರೀಮನ್ನಾರಾಯಣಾಷ್ಟಾಕ್ಷರಮಂತ್ರಾರ್ಥವಾಸುದೇವದ್ವಾದಶಾಕ್ಷರ ಮಂತ್ರಾಂತರ್ಗತಾಂತ್ಯ ಚತುರಕ್ಷರಾರ್ಥ
ವ್ಯಾಹೃತ್ಯರ್ಥಮಾತೃಕಾಮಂತ್ರಾರ್ಥಪ್ರಣವೋಪಾಸಕಾನಾಂ, ಪಾಪಾವಿದ್ಧದೈತ್ಯಪೂಗಾವಿದ್ಧ ಶ್ರೀವಿಷ್ಣುಭಕ್ತ್ಯುದ್ಯನಂತ
ಗುಣಪರಿಪೂರ್ಣ ರಮಾವ್ಯತಿರಿಕ್ತಪೂರ್ವಪ್ರಸಿದ್ಧ ವ್ಯತಿರಿಕ್ತಾನಂತವೇದಪ್ರತಿಪಾದ್ಯ ಮುಖ್ಯತಮಾನಂತ
ಜೀವನಿಯಾಮಕಾನಂತರೂಪ ಭಗವತ್ಕಾರ್ಯಸಾಧಕ ಪರಮದಯಾಲು ಕ್ಷಮಾಸಮುದ್ರ ಭಕ್ತವತ್ಸಲ
ಭಕ್ತಾಪರಾಧಸಹಿಷ್ಣು ಶ್ರೀಮುಖ್ಯಪ್ರಾಣಾವತಾರಭೂತಾನಾಂ, ಅಜ್ಞಜ್ಞಾನಾರ್ಥಿಜ್ಞಾನಯೋಗ್ಯ ಭಗವತ್ಪ್ರಾಪಾತ್ರಭೂತ
ಸಲ್ಲೋಕಕೃಪಾಲುಬ್ರಹ್ಮರುದ್ರಾದ್ಯರ್ಥಿತಭಗವದಾಜ್ಞಾಂ ಶಿರಸಿ ಪರಮಾದರೇಣಾನರ್ಘ್ಯ ಶಿರೋರತ್ನವನ್ನಿಧಾಯ
ತಥಾಽಶೇಷದೇವತಾಪ್ರಾರ್ಥನಾಂ ಹಾರವದ್ಧಾರಿ ನಿಧಾಯ, ಸರ್ವಸ್ವಕೀಯಸಜ್ಜನಾನುಗ್ರಹೇಚ್ಛಯಾ
ಕರ್ಮಭುವ್ಯವತೀರ್ಣಾನಾಂ, ತಥಾಽವತೀರ್ಯ ಸಕಲ ಸಚ್ಛಾಸ್ತ್ರಕರ್ತೃಣಾಂ, ಸಕಲದುರ್ಮತಭಂಜಕಾನಾಂ,
ಅನಾದಿತಃ ಸತ್ಸಂಪ್ರದಾಯಪರಂಪರಾಪ್ರಾಪ್ತ ಶ್ರೀಮದ್ವೈಷ್ಣವಸಿದ್ಧಾಂತ ಪ್ರತಿಷ್ಠಾಪಕಾನಾಂ, ಅತ ಏವ
ಭಗವತ್ಪರಮಾನುಗ್ರಹಪಾತ್ರಭೂತಾನಾಂ, ಸರ್ವದಾ ಭಗವದಾಜ್ಞಯಾ ಭಗವತ್ಸನ್ನಿಧೌ ಪೂಜ್ಯಾನಾಂ, ತಥಾ
ಭಗವತಾ ದತ್ತವರಾಣಾಂ, ದ್ವಾತ್ರಿಂಶಲ್ಲಕ್ಷಣೋಪೇತಾನಾಂ, ತಥಾ ಸಮಗ್ರಗುರುಲಕ್ಷಣೋಪೇತಾನಾಂ,
ಅಸಂಶಯಾನಾಂ, ಪ್ರಸಾದಮಾತ್ರೇಣ ಸ್ವಭಕ್ತಾಶೇಷಸಂಶಯಭೇತ್ಯಾಣಾಂ, ಪ್ರಣವಾದ್ಯಶೇಷ
ವೈಷ್ಣವಮಂತ್ರೋದ್ಧಾರಕಾಣಾಂ, ಸರ್ವದಾ ಸರ್ವವೈಷ್ಣವ ಮಂತ್ರಜಾಪಕಾನಾಂ, ಸಂಸಿದ್ಧಸಪ್ತಕೋಟಿ
ಮಹಾಮಂತ್ರಾಣಾಂ ಭಗವತಿ ಭಕ್ತ್ಯತಿಶಯೇನ ಭಗವದುಪಾಸನಾರ್ಥಂ ಸ್ವೇಚ್ಛಯಾ ಗೃಹೀತರೂಪಾಣಾಂ
ತತ್ರ ತತ್ರ ಪೃಥಕ್ ಪೃಥಕ್ ಭಗವತೋಽನಂತ ರೂಪೇಷು ಪೃಥಕ್‌ಪೃಥಗ್ವೇದೋಕ್ತ ತದನುಕ್ತಭಾರತೋಕ್ತ
ತದನುಕ್ತಸಂಪ್ರದಾಯಾಗತಸ್ವೇತರ ಸ್ವಾಭಿನ್ನತಯಾಽಪ್ಯಶೇಷಶಕ್ತಿವಿಶೇಷಾಭ್ಯಾಂ, ಪೃಥಗ್ವ್ಯವಹಾರ
ವಿಷಯಸರ್ವಸಾಮರ್ಥ್ಯೋಪೇತನಿರವಧಿಕಾನಂತಾನವದ್ಯಕಲ್ಯಾಣಗುಣಗಣಪರಿಪೂರ್ಣಾನಂತಗುಣೋಪ
ಸಂಹರ್ತೃಣಾಂ ತಥಾ ವೇದೋಕ್ತಸರ್ವಕ್ರಿಯೋಪಸಂಹರ್ತೃಣಾಂ, ಏವಂ ಅನಂತರೂಪಾವಯವಗುಣ
ಕ್ರಿಯಾಜಾತ್ಯವಸ್ಥಾವಿಶಿಷ್ಟ ಭಗವದುಪಾಸಕಾನಾಂ, ಪರಮದಯಾಲೂನಾಂ, ಕ್ಷಮಾಸಮುದ್ರಾಣಾಂ,
ಭಕ್ತವತ್ಸಲಾನಾಂ, ಭಕ್ತಾಪರಾಧಸಹಿಷ್ಣೂನಾಂ, ಸ್ವಭಕ್ತಾನ್ ದುರ್ಮಾರ್ಗಾದುದ್ಧೃತ್ಯ ಸನ್ಮಾರ್ಗಸ್ಥಾಪಕಾನಾಂ,
ಸ್ವಭಕ್ತಂ ಮಾಮುದ್ದಿಶ್ಯ ಭಗವತಃ ಪುರಃ ಪರಮದಯಾಲೋ ಕ್ಷಮಾಸಮುದ್ರ ಭಕ್ತವತ್ಸಲ ಭಕ್ತಾಪರಾಧಸಹಿಷ್ಣೋ
ತ್ವದಧೀನಂ ದೀನಂ ದೂನಂ ಅನಾಥಂ ಶರಣಾಗತಮೇನಮುದ್ಧರೇತಿ ವಿಜ್ಞಾಪನಕರ್ತೃಣಾಂ,
ಸರ್ವಜ್ಞಶಿರೋಮಣೀನಾಂ, ಅಶೇಷಗುರ್ವಂತರ್ಯಾಮಿಣಾಂ, ಸದಾ ಭಗವತ್ಪರಾಣಾಂ, ಭಗವತೋಽನ್ಯತ್ರ
ಸರ್ವವಸ್ತುಷು ಮನಃಸಂಗರಹಿತಾನಾಂ, ಸರ್ವತ್ರ ಸರ್ವದಾ ಸರ್ವಾಕಾರ ಸರ್ವಾಧಾರ ಸರ್ವಾಶ್ರಯ
ಸರ್ವೋತ್ಪಾದಕಸರ್ವಪಾಲಕಸರ್ವಸಂಹಾರಕ ಸರ್ವನಿಯಾಮಕ ಸರ್ವಪ್ರೇರಕಸರ್ವಪ್ರವರ್ತಕ
ಸರ್ವನಿವರ್ತಕಯಥಾಯೋಗ್ಯಂ ಸರ್ವಜ್ಞಾನಾ ಜ್ಞಾನಬಂಧಮೋಕ್ಷಪ್ರದ ಸರ್ವಸತ್ತಾಪ್ರದಸರ್ವ
ಶಬ್ದವಾಚ್ಯಸರ್ವಶಬ್ದಪ್ರವೃತ್ತಿನಿಮಿತ್ತ ಸರ್ವಗುಣಾತಿ ಪರಿಪೂರ್ಣತಮ ಸರ್ವದೋಷಾತಿದೂರ
ಸರ್ವಾಚಿಂತ್ಯಸರ್ವೋತ್ತಮಸರ್ವೇಶ್ವರ ಸರ್ವಾತ್ಯಂತ ವಿಲಕ್ಷಣಸ್ವಗತಭೇದ ವಿವರ್ಜಿತತತ್ವಾದಿನಾಭಗದ್ಭಷ್ಟ್ರಾಣಾಂ,
ಅಭಿಮಾನಾದಿ ಸರ್ವದೋಷದೂರಾಣಾಂ, ಅಸೂಯೇರ್ಷ್ಯಾದ್ಯ ಶೇಷಮನೋದೋಷನಿವರ್ತಕಾನಾಂ
ನಿತ್ಯಾಪರೋಕ್ಷೀಕೃತರಮಾಯುಕ್ತಾಶೇಷಭಗವದ್ರೂಪಾಣಾಂ, ಅತ ಏವ ವಿಲೀನಾಶೇಷಪ್ರಕೃತಿಬಂಧಾನಾಂ,
ಅತ ಏವ ದೂರೋತ್ಸಾರಿತಾಶೇಷಾನಿಷ್ಟಾನಾಂ ಅತ ಏವಾಶೇಷಭಕ್ತಾಶೇಷಾನಿಷ್ಟನಿವರ್ತಕಾನಾಂ,
ಪ್ರಣವೋಪಾಸಕಾನಾಂ, ಅಸ್ಮದಾದಿಗುರೂಣಾಂ, ಶ್ರೀಮದಾನಂದತೀರ್ಥಶ್ರೀಮಚ್ಚರಣಾನಾಂ ಅಂತರ್ಯಾಮಿನ್
ಅನಿರುದ್ಧಪ್ರದ್ಯುಮ್ನ ಸಂಕರ್ಷಣವಾಸುದೇವಾತ್ಮಕ ಶ್ರೀಮದ್ವಲ್ಲಭ ಶ್ರೀಲಕ್ಷ್ಮೀವೇದವ್ಯಾಸಾತ್ಮಕ ಅಂಡಸ್ಥಿತಾನಂತ
ರೂಪಾವಯವಗುಣಕ್ರಿಯಾಜಾತ್ಯವಸ್ಥಾವಿಶಿಷ್ಟ ರಮಾಯುಕ್ತಕ್ಷೀರಾಬ್ಧಿಶೇಷಶಾಯಿ ಶ್ರೀಪದ್ಮನಾಭಾತ್ಮ
ಕಾಂಡಾದ್ಬಹಿರಭಿವ್ಯಕ್ತಶುದ್ಧಸೃಷ್ಟಿತ್ವೇನಾಭಿಮತ ಶ್ರೀಚತುರ್ಮುಖ ಮುಖ್ಯಪ್ರಾಣೋಪಾಸ್ಯತ್ವಾದ್ಯನೇಕ ಪ್ರಯೋಜನ–
ಕಾನಂತಾನಂತರೂಪಮೂಲಭೂತ ತಥಾಽಶೇಷಜಗತ್ಪಾಲನಪ್ರಯೋಜನಕ ಶಾಂತಿಪತ್ಯನಿರುದ್ಧ ಮೂಲಭೂತಾ
ಶೇಷ ಜಗತ್‌ಸೃಷ್ಟಿಪ್ರಯೋಜನಕಕೃತಿಪತಿ ಪ್ರದ್ಯುಮ್ನಮೂಲಭೂತಜಗತ್ಸಂಹಾರ ಪ್ರಯೋಜನಕ ಜಯಾಪತಿ
ಸಂಕರ್ಷಣಮೂಲಭೂತ ತಥಾ ಸ್ವಸ್ವಸಮಗ್ರಯೋಗ್ಯತಾಭಿಜ್ಞ ಪರಮಾನುಗ್ರಹಶೀಲಭಗವತ್ಪ್ರೇರಿತ ಚತುರ್ಮುಖಾದಿ
ಸದ್ಗುರೂಪದಿಷ್ಟಸ್ವಸ್ವಯೋಗ್ಯಭಗವದ್ರೂಪಗುಣೋಪಾಸನಯಾ ಸಂಜಾತಸ್ವಸ್ವಯೋಗ್ಯ ಭಗವದ್ರೂಪ ವಿಶೇಷದರ್ಶನ
ಭೋಗಾಭ್ಯಾಂ ವಿನಷ್ಟಾನಿಷ್ಟಸಂಚಿತಪ್ರಾರಬ್ಧಲಕ್ಷಣಾಶೇಷಕರ್ಮಣಾಂ, ಸ್ವಸ್ವಯೋಗ್ಯತಾನುಸಾರೇಣ
ಸಂಪೂರ್ಣಸಾಧನಾನಾಂ, ಪೂರ್ವಕಲ್ಪೇ ಬ್ರಹ್ಮಣಾ ಸಹ ವಿರಜಾನದೀಸ್ನಾನೇನ ತ್ಯಕ್ತಲಿಂಗಾನಾಂ, ತಥಾ
ವಿನಷ್ಟಾವಶಿಷ್ಟೇಷ್ಟಾಶೇಷ ಪ್ರಾರಬ್ಧಕರ್ಮಣಾಂ ಪ್ರಲಯಕಾಲೇ ಭಗವದುದರೇ ವಸತಾಂ ಆನಂದಮಾತ್ರವಪುಷಾಂ
ತದನುಭವರಹಿತಾನಾಂ ಸ್ವಸ್ವಯೋಗ್ಯ ಭಗವದ್ರೂಪ ವಿಶೇಷಧ್ಯಾನರತಾನಾಂ, ಸೃಷ್ಟಿಕಾಲೇ ಭಗವದಾಜ್ಞಯಾ
ಭಗವದುದರಾದ್ಬಹಿರ್ನಿರ್ಗತಾನಾಂ ಶ್ರೀಶ್ವೇತದ್ವೀಪದರ್ಶನಂ ನಿಮಿತ್ತೀಕೃತ್ಯ ಪ್ರಧಾನಾವರಣಭೂತ
ಸ್ವೇಚ್ಛಾಪಸರಣೇನ ಸ್ವಸ್ವಯೋಗ್ಯಾನಂದಾವಿರ್ಭಾವಲಕ್ಷಣಮುಕ್ತಿಪ್ರದಾನಪ್ರಯೋಜನಕಮಾಯಾಪತಿ
ಶ್ರೀವಾಸುದೇವಾತ್ಮಕಲಕ್ಷ್ಯಾತ್ಮಕಪ್ರಲಯಾಬ್ಧಿಸ್ಥಶ್ರೀವಟಪತ್ರಶಾಯ್ಯಶೇಷಜಗದುದರಾಶೇಷ ಮುಕ್ತನಾಭಿದೇಶೋರ್ದ್ಧ–
ಭಾಗಕುಕ್ಷ್ಯಾಖ್ಯದೇಶತ್ರಿವಿಧಾಶೇಷಸಂಸಾರಿನಾಭಿದೇಶಾಖಿಲತಮಃಪತಿತನಾಭ್ಯಧೋಭಾಗದೇಶಶ್ರೀಭೂಮ್ಯಾಲಿಂಗಿತ
ಕಾಲಾದಿಚೇಷ್ಟಕಪರಮಾಣ್ವಾದ್ಯಶೇಷಕಾಲಾವಯವಸೃಷ್ಟ್ಯಾದಿಕರ್ತೃಶೇಷನಾಮಕಪರಮ ಪುರುಷನಾಮಕ
ಶ್ರೀಚತುರ್ಮುಖ ಮುಖ್ಯಪ್ರಾಣೋಪಾಸಿತಚರಣಾನಿರುದ್ಧಾದಿಚತೂರೂಪಾತ್ಮಕ ಗಾಯತ್ರೀನಾಮಕ ಸವಿತೃ
ನಾಮಕರೂಪ ವಿಶೇಷಾತ್ಮಕವ್ಯಾಪ್ತರೂಪ ಬೃಹಚ್ಛರೀರಶೂನ್ಯಾಭಿಧಕಾಲಾಭಿಧ ಕೇವಲಾಭಿಧ ಬ್ರಹ್ಮಾಭಿ–
ಧಾನಂತಾಭಿಧರೂಪವಿಶೇಷಾತ್ಮಕ ನಿರುಪಚರಿತಮೂಲರೂಪ ನಿರುಪಚರಿತವ್ಯಾಪ್ತಪ್ರತಿಪಾದ್ಯಾನಂತ
ತೇಜಃಪುಂಜತಾದ್ಯಶರಮಾಯುಕ್ತರೂಪವಿಶೇಷಾತ್ಮಕ ಗಾಯತ್ರೀಭೂತವಾಕ್‌ಪೃಥಿವೀಶರೀರಹೃದಯಭೇದೇನ
ಷಡ್ವಿಧಗಾಯತ್ರೀನಾಮಕ ಲೋಕವೇದಸಮೀರರಮಾಂತರ್ಗತಪ್ರಣವಾಖ್ಯತುರೀಯಪಾದೋಪೇತಗಾಯತ್ರೀ–
ಪಾದಚತುಷ್ಟಯಪ್ರತಿಪಾದ್ಯವೈಕುಂಠಸ್ಥಿತಅನಂತಾಸನಸ್ಥಿತಶ್ವೇತದ್ವೀಪಸ್ಥಿತಸರ್ವಜೀವಸ್ಥಿತ ರೂಪಭೇದೇನ
ಚತೂರೂಪಾತ್ಮಕ ದೇಹವ್ಯಾಪ್ತ ದೇಹಾಂತರ್ಯಾಮಿ ಜೀವವ್ಯಾಪ್ತ ಜೀವಾಂತರ್ಯಾಮಿರೂಪಭೇದೇನ
ಚತೂರೂಪಾತ್ಮಕನಿರುಪಚರಿತಸರ್ವವಾಗರ್ಥಪ್ರತಿಪಾದಕ ಶ್ರೀದೇವ್ಯಾದಿ ರಮಾರೂಪಾಷ್ಟಕಾಭಿಮನ್ಯ–

ಮಾನಚಕ್ರಶಂಖವರಾಭಯಯುಕ್ತಹಸ್ತಚತುಷ್ಟಯೋಪೇತಪ್ರದೀಪವರ್ಣಸರ್ವಾಭರಣಭೂಷಿತ–
ವಿಶ್ವಾದಿಭಗವದ್ರೂಪಾಷ್ಟಕಪ್ರತಿಪಾದಕಾಕಾರಾದ್ಯಷ್ಟಾಕ್ಷರಾತ್ಮಕಶ್ರೀಮತ್ಪ್ರಣವಾದ್ಯಷ್ಟಮಹಾಮಂತ್ರಪ್ರತಿಪಾದ್ಯಾಷ್ಟ
ರೂಪಾತ್ಮಕಮಂತ್ರಾಧ್ಯಾಯೋಕ್ತಭೂವರಾಹಾದ್ಯಶೇಷವೈಷ್ಣವಮಂತ್ರಪ್ರತಿಪಾದ್ಯಭೂವರಾಹಾದ್ಯಶೇಷರೂಪ
ವಿಶೇಷಾತ್ಮಕ ರಮಾದಿಮಂತ್ರಪ್ರತಿಪಾದ್ಯರಮಾದಿನಿಷ್ಠರಮಾದಿನಾಮಕರೂಪ ವಿಶೇಷಾತ್ಮಕಶ್ರೀಲಕ್ಷ್ಮೀನೃಸಿಂಹಾತ್ಮಕ
ಪರಮದಯಾಲೋ ಕ್ಷಮಾಸಮುದ್ರ ಭಕ್ತವತ್ಸಲ ಭಕ್ತಾಪರಾಧಸಹಿಷ್ಣೋ ದೇಶಕಾಲಾಧಿಪತೇ
ದೇಹೇಂದ್ರಿಯಾಧಿಪತೇ ಸೂರ್ಯವಂಶಧ್ವಜ ರಘುಕುಲತಿಲಕ ಲಕ್ಷ್ಮಣಭರತಶತ್ರುಘ್ನಾಗ್ರಜ ಶ್ರೀಮದ್ಧನುಮ
ದುಪಾಸಿತಚರಣ ಸೀತಾಪತೇ ಶ್ರೀರಾಮಚಂದ್ರ! ತ್ವದಾಜ್ಞಯಾ ತ್ವತ್ಪ್ರಸಾದಾತ್ ತ್ವತ್ಪ್ರೇರಣಯಾ ತ್ವತ್ಪ್ರೀತ್ಯರ್ಥಂ
ತ್ವಾಮುದ್ದಿಶ್ಯ ತ್ವಾಮನುಸ್ಮರನ್ನೇವ ತ್ವದಾಜ್ಞಯಾ ನಿಯತೇನ ಮನ್ನಿಯಾಮಕೇನ ಸತ್ತಾಪ್ರದವಾಯುನಾಮಕ
ಚೇಷ್ಟಾಪ್ರದಪ್ರಾಣನಾಮಕಧಾರಣಾಪ್ರದಧರ್ಮನಾಮಕ ಮುಕ್ತಿಪದಭಕ್ತಿನಾಮಕರೂಪವಿಶೇಷೈರ್ಮದ್ಧೃದಿ ಸ್ಥಿತೇನ
ಪರಮದಯಾಲುನಾ ಕ್ಷಮಾಸಮುದ್ರೇಣ ಭಕ್ತವತ್ಸಲೇನ ಭಕ್ತಾಪರಾಧಸಹಿಷ್ಣುನಾ ಸರ್ವಸ್ವಾಮಿನಾ ಸರ್ವಪ್ರೇರಕೇಣ
ಸರ್ವತಾತ್ವಿಕದೇವತಾಪ್ರೇರಕೇಣ, ಸರ್ವತಾತ್ವಿಕಾಸುರಭಂಜಕೇನ ತಥಾ ತತ್ಪ್ರೇರಣಾಪ್ರಯುಕ್ತಾಶೇಷ–
ದುರ್ಮತಭಂಜಕೇನ, ಅತ ಏವ ಪ್ರಭಂಜನಶಬ್ದವಾಚ್ಯೇನ, ಪ್ರತಿದಿನಂ ಪ್ರತಿಕ್ಷಣಂ ಬುದ್ಧಿಶೋಧಕೇನ,
ಸರ್ವಕರ್ಮಕರ್ತ್ರಾ ಸರ್ವಕರ್ಮಕಾರಯಿತ್ರಾ ಸರ್ವಕರ್ಮಸ್ವಾಮಿನಾ ಸರ್ವಕರ್ಮಸಮರ್ಪಕೇಣ ಸರ್ವಕರ್ಮ
ಫಲಭೋಕ್ತ್ರಾ ಸರ್ವಕರ್ಮಫಲಭೋಜಯಿತ್ರಾ ಸರ್ವಕರ್ಮಪ್ರೇರಕೇಣ ಸರ್ವಕರ್ಮೋದ್ಭೋಧಕೇನ
ಸರ್ವಕರ್ಮಶುದ್ಧಿಪ್ರದೇನ ಸರ್ವಕರ್ಮಸಿದ್ಧಿಪ್ರದೇನ ಸರ್ವಕರ್ಮನಿಷ್ಠೇನ ಸರ್ವಕರ್ಮಸಾಕ್ಷಿಣಾ ಸರ್ವಕರ್ಮನಿಷ್ಠ
ಭಗವದ್ರೂಪೋಪಾಸಕೇನ ಅತ ಏವ ಅಶೇಷಜೀವನಿಃಸಂಖ್ಯಾನಾದಿಕಾಲೀನಧರ್ಮಾಧರ್ಮ
ದ್ರಷ್ಟೃಸ್ವೇಚ್ಛಯೋದ್ಭೋಧಕೇನ ತದ್ವಾಚಕಕಪಿಲೋಪಾಸಕೇನ, ರಮಾವ್ಯತಿರಿಕ್ತಪೂರ್ವಪ್ರಸಿದ್ಧ–
ವ್ಯತಿರಿಕ್ತಾನಂತವೇದಪ್ರತಿಪಾದ್ಯಮುಖ್ಯತಮೇನ, ಅನಂತಗುಣಪರಿಪೂರ್ಣೇನ ಸರ್ವದೋಷದೂರೇಣ
ತ್ವಚ್ಚಿತ್ತಾಭಿಜ್ಞೇನ ತ್ವಚ್ಚಿತ್ತಾನುಸಾರಚಿತ್ತೇನ ತ್ವತ್ಪರಮಾನುಗ್ರಹಪಾತ್ರಭೂತೇನ ಮದ್ಯೋಗ್ಯತಾಭಿಜ್ಞೇನ
ಶ್ರೀಭಾರತೀರಮಣೇನ ರುದ್ರಾದ್ಯಶೇಷತಾತ್ವಿಕದೇವತೋಪಾಸಿತಚರಣೇನ ಮಮ ಸರ್ವಾಸ್ವವಸ್ಥಾಸು ಚಿತ್ರಧಾ
ವಿಚಿತ್ರಧಾ ತ್ವದುಪಾಸಕೇನ, ಶ್ರೀಮುಖ್ಯಪ್ರಾಣೇನ ಪ್ರೇರಿತಃಸನ್ ತ್ವತ್ಸಂಸ್ಮೃತಿಪೂರ್ವಕಂ ಶಯನಾತ್
ಸಮುತ್ಥಾಯಾದ್ಯತನಂ ಸ್ವವರ್ಣಾಶ್ರಮೋಚಿತಂ ದೇಶಕಾಲಾವಸ್ಥೋಚಿತಂ ನಿತ್ಯನೈಮಿತ್ತಿಕಕಾಮ್ಯಭೇದೇನ
ತ್ರಿವಿಧಂ ತ್ವತ್ಪೂಜಾತ್ಮಕಂ ಕರ್ಮ ಯಥಾಶಕ್ತಿ ಯಥಾಜ್ಞಪ್ತಿ ಯಥಾವೈಭವಂ ಕರಿಷ್ಯೇ । ಮದಾಜ್ಞಾಕಾರಿಭಿರ್ವಿ–
ದ್ಯಾಸಂಬಂಧಿಭಿರ್ದೇಹಸಂಬಂಧಿಭಿಶ್ಚ ತ್ವದೀಯೈರಶೇಷೈರ್ಜನೈಸ್ತ ತ್ವತ್ಸರ್ವಕರ್ಮಕರ್ತೃತ್ವಕಾರಯಿತೃತ್ವಾದ್ಯನು–
ಸಂಧಾನಪೂರ್ವಕಂ ಕಾರಯಿಷ್ಯೇ ಚ ॥

॥ ಇತಿ ಶ್ರೀರಾಘವೇಂದ್ರಾಖ್ಯಯತಿನಾ ಕೃತಮಂಜಸಾ ।
ಪ್ರಾತಃಸಂಕಲ್ಪಗದ್ಯಂ ಸ್ಯಾತ್ ಪ್ರೀತ್ಯೈ ಮಾಧವಮದ್ಗುರೋಃ ॥
॥ ಇತಿ ಶ್ರೀಮದ್ರಾಘವೇಂದ್ರತೀರ್ಥಕೃತಂ ಪ್ರಾತಃಸಂಕಲ್ಪಗದ್ಯಮ್ ॥

ಸರ್ವಸಮರ್ಪಣಗದ್ಯಮ್

ಜಾಗ್ರತ್ಸ್ವಪ್ನಸುಷುಪ್ತ್ಯಾಖ್ಯಾವಸ್ಥಾತ್ರಯನಿಯಾಮಕಮದಂತರ್ಯಾಮಿ ಮುಖ್ಯಪ್ರಾಣಾಂತರ್ಗತ
ವಿಶ್ವತೈಜಸಪ್ರಾಜ್ಞಾತ್ಮಕ ಹಿಂಕಾರಾದಿಷಟ್ಸಾಮಪ್ರತಿಪಾದ್ಯ ಷಟ್ಕಾಲನಿಯಾಮಕಾನಿರುದ್ಧಪ್ರದ್ಯುಮ್ನ–
ಸಂಕರ್ಷಣವಾಸುದೇವವರಾಹನಾರಸಿಂಹಷಣ್ಮೂರ್ತ್ಯಾತ್ಮಕಸ್ವಹೃದಯಮಧ್ಯಸ್ಥಿತಸುಷುಮ್ನಾನಾಡೀ–
ದಕ್ಷಿಣಪಾರ್ಶ್ವಸ್ಥಿತಪಂಚಾಶತ್ಸಂಖ್ಯಾಕಪಿಂಗಳಾನಾಡೀಷುತದುತ್ತರಪಾರ್ಶ್ವಸ್ಥಿತತಾವತ್ಸಂಖ್ಯಾಕ–
ವ್ಯಂಜನಾರ್ಣಪ್ರತಿಪಾದ್ಯತಾವತ್ಸಂಖ್ಯಾಕೇಡಾನಾಡೀಷು ತತ್ತದ್ಯೋಗ್ಯತತ್ತತ್ಕಾಲಾನುಸಾರಪ್ರಾಪ್ತ–
ತತ್ತನ್ನಾಡೀಸ್ಥಿತಬೃಹತೀಛಂದಃಋಕ್ಸಹಸ್ರಗತಷಟ್ತ್ರಿಂಶತ್ಸಹಸ್ರಸ್ವರಾಖ್ಯಾಕ್ಷರಪ್ರತಿಪಾದ್ಯ ತನ್ನಿಷ್ಠ ತನ್ನಿಯಾಮಕ
ಪ್ರಾತರ್ಮಾಧ್ಯಂದಿನಸಾಯಮಾಖ್ಯಸವನತ್ರಯತತ್ತತ್ಕಾಲೀನತದಭಿಮಾನಿವಸುರುದ್ರಾದಿತ್ಯೋಪಾಸ್ಯ
ಪರಮಾಣುಸಂಬಂಧಿತಾವತ್ಸಂಖ್ಯಾಕಾಹರ್ನಿಯಾಮಕಾಹರ್ನಾಮಕ ಮುಖ್ಯಪ್ರಾಣೋಪಾಸ್ಯ ರಮಾಯುಕ್ತ
ಪುರುಷರೂಪಾತ್ಮಕ ಪ್ರಾದೇಶಮಾತ್ರಹೃದಯವ್ಯಾಪಕ ಪ್ರಾದೇಶಪರಿಮಿತಸ್ಥಾನೇಶಾತ್ಮಕ ದೇಹಾಂತರ್ಗತ
ದೇಹಾಂಗುಷ್ಠಪರಿಮಿತಜೀವಾಂತರ್ಗತ ಜೀವಾಂಗುಷ್ಠ ಪರಿಮಿತ ಸ್ವಹೃದಯಕಮಲಕರ್ಣಿಕಾಮೂಲಸ್ಥಿತ
ಮೂಲೇಶಾತ್ಮಕ ತಾವತ್ಪರಿಮಿತಕರ್ಣಿಕಾಗ್ರಸ್ಥಿತ ಬಿಂಬರೂಪೀ ಜೀವೇಶತದೃಷ್ಟ್ಯಾದಿಕಾಲತಃ
ಪ್ರಾಪ್ತಮದೀಯಶುಭಾಶುಭ ಕರ್ಮಣೋರ್ಮಧ್ಯೇ ಶುಭಕರ್ಮಾನುಸಾರತಸ್ತತ್ಪ್ರೇರಿತೇನ ಮುಖ್ಯಪ್ರಾಣೇನ
ತತ್ತ್ವಾಭಿಮಾನಿದೇವತಾದ್ವಾರಾನುಕಾರಿತಾವಸ್ಥಾತ್ರಯನಿಯಾಮಕಾನುಭವಕಾಲಘಟಿತಶ್ರೀವಿಷ್ಣುಸ್ವಾತಂತ್ರ್ಯ
ಸ್ಮೃತಿಪ್ರಧಾನಕ ನಿತ್ಯನೈಮಿತ್ತಿಕಕಾಮ್ಯಭೇದೇನ ತ್ರಿವಿಧವಿದ್ಯಾಶ್ರಿತಸ್ವವರ್ಣಾಶ್ರಮೋಚಿತ ಸಂಕಲ್ಪಿತ
ಭಗವತ್ಪೂಜಾತ್ಮಕಕರ್ಮಜನ್ಯಫಲೇನಾಪರೋಕ್ಷಜ್ಞಾನಾತ್ ಪೂರ್ವಮಂತಃಕರಣಶುದ್ಧಿದ್ವಾರಾ
ತದುಪಾಸಕೇನ ತತಃ ಪರಂ ಭಗವದಿಚ್ಛಯಾ ಪ್ರಾಪ್ತನಿಜಗುರೂಪದಿಷ್ಟಸ್ವಬಿಂಬವಿಷಯಕ ಪೂರ್ಣಸಚ್ಚಿದಾ
ನಂದಾತ್ಮಕ ಚತುರ್ಗುಣಾದ್ಯುಪಾಸನ ಜಿಜ್ಞಾಸಾಪಾಸಾದಿಭಿಃ ಸ್ವಬಿಂಬಾಪರೋಕ್ಷಜ್ಞಾನೋತ್ಪಾದಕೇನ
ಮನುಷ್ಯೋತ್ತ ಮಾರಭ್ಯ ಚತುರ್ಮುಖಪರ್ಯಂತಾನಾಂ ಪಂಚವಿಧಮುಕ್ತಿಯೋಗ್ಯಾನಾಂ ಚ
ಸ್ವಬಿಂಬೋಪಾಸಿಭಿರ್ಲಿಂಗಾಪಗಮೇ ಸ್ವರೂಪಾನಂದಾವಿರ್ಭಾವವೈಚಿತ್ರ್ಯಾನಂದಪ್ರದಜ್ಞಾನೇನ ತ್ವಯಿ
ಸಮರ್ಪಿತೇನ ತ್ವತ್ಪೂಜೈವಾಸ್ತು ।

ತಥಾ ಮದೀಯಶುಭಾಶುಭಕರ್ಮಣೋರ್ಮಧ್ಯೇಽಶುಭಕರ್ಮಾನುಸಾರೇಣ ತ್ವತ್ಪ್ರೇರಿತ
ಮುಖ್ಯಪ್ರಾಣೇನ ತತ್ತ್ವಾಭಿಮಾನ್ಯಸುರಮಾರಭ್ಯ ಕಲಿಪರ್ಯಂತಾನಾಂ ತಮೋಯೋಗ್ಯಾನಾಂ
ಪಾಪಬಾಧಿಭಿರ್ಗದಾಯುಧ ಪ್ರದಾನೇನ ಮಹಾತಮಸಿ ಸ್ಥಿತಾನಾಂ ದುಃಖಾನುಭವೇನ
ಸ್ವರೂಪಭೂತದುಃಖಾತಿಶಯಪ್ರದಾತೇತಿ ಜ್ಞಾನೇನ ತ್ವಯಿ ಸಮರ್ಪಿತೇನ ತ್ವತ್ಪೂಜೈವಾಸ್ತು ॥

॥ ಇತಿ ಶ್ರೀರಾಘವೇಂದ್ರತೀರ್ಥಕೃತಂ ಸರ್ವಸಮರ್ಪಣಗದ್ಯಮ್ ॥

ಶ್ರೀಹಂಸನಾಮಕ ಪರಮಾತ್ಮನ ಸಾಕ್ಷಾತ್ಪರಂಪರೆಯಾದ ಜಗದ್ಗುರು ಶ್ರೀಮನ್ಮಧ್ವಾಚಾರ್ಯರ ಮೂಲಮಹಾಸಂಸ್ಥಾನವೆಂದು ಶ್ರೀವಿದ್ಯಾಮಠವೆಂದು ಪ್ರಸಿದ್ಧವಾದ ಶ್ರೀರಾಘವೇಂದ್ರಸ್ವಾಮಿಗಳ ಮಠದ ಗುರುಪರಂಪರೆಯನ್ನು ಸಾರ್ವಜನಿಕರ ಅವಗಾಹನೆಗಾಗಿ ಇಲ್ಲಿ ಕೊಡಲಾಗಿದೆ.

೧.	ಶ್ರೀಹಂಸನಾಮಕ ಪರಮಾತ್ಮ	
೨.	ಶ್ರೀಚತುರ್ಮುಖ ಬ್ರಹ್ಮದೇವರು	
೩.	ಶ್ರೀಸನಕತೀರ್ಥರು	
೪.	ಶ್ರೀಸನಂದನತೀರ್ಥರು	
೫.	ಶ್ರೀಸನತ್ಕುಮಾರತೀರ್ಥರು	
೬.	ಶ್ರೀಸನಾತನತೀರ್ಥರು	
೭.	ಶ್ರೀದೂರ್ವಾಸತೀರ್ಥರು	
೮.	ಶ್ರೀಜ್ಞಾನನಿಧಿತೀರ್ಥರು	
೯.	ಶ್ರೀಗರುಡವಾಹನತೀರ್ಥರು	
೧೦.	ಶ್ರೀಕೈವಲ್ಯತೀರ್ಥರು	
೧೧.	ಶ್ರೀಜ್ಞಾನೇಶತೀರ್ಥರು	
೧೨.	ಶ್ರೀಪರತೀರ್ಥರು	
೧೩.	ಶ್ರೀಸತ್ಯಪ್ರಜ್ಞತೀರ್ಥರು	
೧೪.	ಶ್ರೀಪ್ರಾಜ್ಞತೀರ್ಥರು	
೧೫.	ಶ್ರೀಅಚ್ಯುತಪ್ರೇಕ್ಷಾಚಾರ್ಯರು	
೧೬.	ಶ್ರೀಮನ್ಮಧ್ವಾಚಾರ್ಯರು	* ಮಾಘ ಶು ೯
೧೭.	ಶ್ರೀಪದ್ಮನಾಭತೀರ್ಥರು	* ಕಾರ್ತಿಕ ಕೃ ೧೪
೧೮.	ಶ್ರೀನರಹರಿತೀರ್ಥರು	* ಪುಷ್ಯ ಕೃ ೭
೧೯.	ಶ್ರೀಮಾಧವತೀರ್ಥರು	* ಭಾದ್ರ ಕೃ ೩೦
೨೦.	ಶ್ರೀಅಕ್ಷೋಭ್ಯತೀರ್ಥರು	* ಮಾರ್ಗ ಕೃ ೫
೨೧.	ಶ್ರೀಜಯತೀರ್ಥರು	* ಆಷಾಢ ಕೃ ೫
೨೨.	ಶ್ರೀವಿದ್ಯಾಧಿರಾಜತೀರ್ಥರು	* ವೈಶಾಖ ಶು ೩
೨೩.	ಶ್ರೀಕವೀಂದ್ರತೀರ್ಥರು	* ಚೈತ್ರ ಶು ೯
೨೪.	ಶ್ರೀವಾಗೀಶತೀರ್ಥರು	* ಚೈತ್ರ ಕೃ ೩
೨೫.	ಶ್ರೀರಾಮಚಂದ್ರತೀರ್ಥರು	* ವೈಶಾಖ ಶು ೬
೨೬.	ಶ್ರೀವಿಬುಧೇಂದ್ರತೀರ್ಥರು	* ಮಾರ್ಗ ಶು ೧೦
೨೭.	ಶ್ರೀಜಿತಾಮಿತ್ರತೀರ್ಥರು	* ಮಾರ್ಗ ಕೃ ೩೦
೨೮.	ಶ್ರೀರಘುನಂದನತೀರ್ಥರು	* ಕಾರ್ತಿಕ ಕೃ ೮
೨೯.	ಶ್ರೀಸುರೇಂದ್ರತೀರ್ಥರು	* ಪುಷ್ಯ ಶು ೧೨
೩೦.	ಶ್ರೀವಿಜಯೀಂದ್ರತೀರ್ಥರು	* ಜ್ಯೇಷ್ಠ ಕೃ ೧೩
೩೧.	ಶ್ರೀಸುಧೀಂದ್ರತೀರ್ಥರು	* ಫಾಲ್ಗುಣ ಕೃ ೨
೩೨.	ಶ್ರೀಮದ್ರಾಘವೇಂದ್ರತೀರ್ಥ ಗುರುಸಾರ್ವಭೌಮರು	* ಶ್ರಾವಣ ಕೃ ೨
೩೩.	ಶ್ರೀಯೋಗೀಂದ್ರತೀರ್ಥರು	* ಮಾಘ ಶು ೧೦
೩೪.	ಶ್ರೀಸೂರೀಂದ್ರತೀರ್ಥರು	* ಜ್ಯೇಷ್ಠ ಶು ೨
೩೫.	ಶ್ರೀಸುಮತೀಂದ್ರತೀರ್ಥರು	* ಆಶ್ವಿನ ಕೃ ೧೨
೩೬.	ಶ್ರೀಉಪೇಂದ್ರತೀರ್ಥರು	* ಮಾರ್ಗಶಿರ ಕೃ ೮
೩೭.	ಶ್ರೀವಾದೀಂದ್ರತೀರ್ಥರು	* ಜ್ಯೇಷ್ಠ ಶು ೯
೩೮.	ಶ್ರೀವಸುಧೇಂದ್ರತೀರ್ಥರು	* ಆಶ್ವಿನ ಕೃ ೭
೩೯.	ಶ್ರೀವರದೇಂದ್ರತೀರ್ಥರು	* ಆಷಾ ಶು ೬
೪೦.	ಶ್ರೀಧೀರೇಂದ್ರತೀರ್ಥರು	* ಫಾಲ್ಗುಣ ಶು ೧೩
೪೧.	ಶ್ರೀಭುವನೇಂದ್ರತೀರ್ಥರು	* ವೈಶಾ ಕೃ ೭
೪೨.	ಶ್ರೀಸುಬೋಧೇಂದ್ರತೀರ್ಥರು	* ಚೈತ್ರ ಕೃ ೩
೪೩.	ಶ್ರೀಸುಜನೇಂದ್ರತೀರ್ಥರು	* ಕಾರ್ತಿಕ ಕೃ ೮
೪೪.	ಶ್ರೀಸುಜ್ಞಾನೇಂದ್ರತೀರ್ಥರು	* ಶ್ರಾವಣ ಕೃ ೪
೪೫.	ಶ್ರೀಸುಧರ್ಮೇಂದ್ರತೀರ್ಥರು	* ಪುಷ್ಯ ಕೃ ೫
೪೬.	ಶ್ರೀಸುಗುಣೇಂದ್ರತೀರ್ಥರು	* ಮಾರ್ಗ ಶು ೧೫
೪೭.	ಶ್ರೀಸುಪ್ರಜ್ಞೇಂದ್ರತೀರ್ಥರು	* ಮಾಘ ಕೃ ೬
೪೮.	ಶ್ರೀಸುಕೃತೀಂದ್ರತೀರ್ಥರು	* ಆಶ್ವೀ ಶು ೧೦
೪೯.	ಶ್ರೀಸುಶೀಲೇಂದ್ರತೀರ್ಥರು	* ಆಷಾ ಶು ೩
೫೦.	ಶ್ರೀಸುವ್ರತೀಂದ್ರತೀರ್ಥರು	* ವೈಶಾ ಶು ೧೨
೫೧.	ಶ್ರೀಸುಯಮೀಂದ್ರತೀರ್ಥರು	* ಪುಷ್ಯ ಶು ೨
೫೨.	ಶ್ರೀಸುಜಯೀಂದ್ರತೀರ್ಥರು	* ಮಾಘ ಶು ೪
೫೩.	ಶ್ರೀಸುಶಮೀಂದ್ರತೀರ್ಥರು	* ಚೈತ್ರ ಕೃ ೨
೫೪.	ಶ್ರೀಸುಯತೀಂದ್ರತೀರ್ಥರು	*ಫಾಲ್ಗುಣ ಕೃ ೫

* ಆರಾಧನಾ ದಿನಗಳು

ಶ್ರೀಹಂಸನಾಮಕ ಪರಮಾತ್ಮನ ಸಾಕ್ಷಾತ್ಪರಂಪರೆಯ ಶ್ರೀಮಠದ ಪ್ರಸ್ತುತ ಪೀಠಾಧಿಪತಿಗಳು

ಶ್ರೀಸುಬುಧೇಂದ್ರತೀರ್ಥರು

ಶ್ರೀಗುರುಪರಂಪರಾ ಚರಮಶ್ಲೋಕಗಳು

ಹಂಸವಾಹನಸುವ್ಯಕ್ತಹಂಸತತ್ತ್ವೋಪದೇಶಕಮ್ ।
ಹಂಸಾಶ್ರಮಯುತಂ ದೇವಂ ಭಜೇಽಹಂಹಂಸರೂಪಿಣಮ್॥

ಶ್ರೀರಾಮಂ ಸತತಂ ಭಕ್ತ್ಯಾ ವಿಶ್ವಕರ್ಮವಿನಿರ್ಮಿತಮ್ ।
ಅರ್ಚಯಂತಂ ಯತಿಂ ವಂದೇ ಚತುರಂ ಚತುರಾನನಮ್ ॥

ಸನಕಾದಿಸುಯೋಗೀಂದ್ರಾನ್ ಹಂಸಧ್ಯಾನಪರಾಯಣಾನ್ ।
ಹಂಸಾದಿಪರಮಾನ್ ಭಕ್ತ್ಯಾ ಭಜೇ ಸದ್ಗುರುಪುಂಗವಾನ್ ॥

ಕಾಷಾಯವಸ್ತ್ರದಂಡಾದಿಕಮಂಡಲುಮೃಗಾಜಿನಮ್ ।
ತಪಃ ಕುರ್ವಂತಮುಚ್ಚೈಃ ಸದ್ಗುರುಂ ದೂರ್ವಾಸಸಂ ಭಜೇ ॥

ಪಕ್ಷೀಶವಾಹನಗುಣಧ್ಯಾತಾರಂ ಪಕ್ಷಿವಾಹನಮ್ ।
ಅರ್ಚಯಂತಂ ಯತಿವರಂ ವಂದೇ ಪಕ್ಷೀಶವಾಹನಮ್ ॥

ಲಕ್ಷ್ಮೀಪತೇಃ ಸುಚರಣನಲಿನಭ್ರಮರಾಯಿತಮ್ ।
ಜ್ಞಾನೇಶತೀರ್ಥಮತುಲಂ ನೌಮಿ ಸಜ್ಜ್ಞಾನದಾಯಕಮ್ ॥

ಪರಾಪರವಿವೇಕಜ್ಞಂ ಪಾರಾಶರ್ಯಮತಾನುಗಮ್ ।
ತತ್ತ್ವೋಪದೇಶಕರ್ತಾರಂ ಪರತೀರ್ಥಗುರುಂ ಭಜೇ ॥

ಸಾಮಾಚ್ಛಾದಿತಶಾಸ್ತ್ರಾಣಿ ಸಾಂಕರ್ಯೈ ಬುದ್ಧಿಶಕ್ತಿತಃ ।
ಸುವ್ಯಕ್ತಾನ್ಯಕರೋದ್ಯೇನ ಸತ್ಯಪ್ರಜ್ಞಗುರುಂ ಭಜೇ ॥

ಪ್ರಕೃಷ್ಟಜ್ಞಾನವತ್ತ್ವಾದ್ಧಿ ಪ್ರಾಜ್ಞಶಾಸ್ತ್ರಯುತತ್ವತಃ ।
ಪ್ರಾಜ್ಞತೀರ್ಥೇತಿ ವಿಖ್ಯಾತಃ ಭೂಯಾಜ್ಜ್ಞಾನಸಮೃದ್ಧಯೇ ॥

ಅಚ್ಯುತಧ್ಯಾನನಿರತಂ ಬುಭುತ್ಸುಂ ತತ್ತ್ವಮಾದರಾತ್ ।
ಮಧ್ವೋಪದೇಶಕರ್ತಾರಮಚ್ಯುತಪ್ರೇಕ್ಷಿತಂ ಭಜೇ ॥

ವೇದವ್ಯಾಸಮನೋಭಾವಂ ವ್ಯಂಜಯನ್ನುದ್ಧರನ್ ಜನಾನ್ ।
ಆನಂದತೀರ್ಥಸುಮುನಿರ್ಭೂಯಾತ್ತತ್ತ್ವವಿನಿರ್ಣಯೇ ॥

ಶ್ರೀಶಾದಿದೇವತಾರಂಭಾಂ ಶ್ರೀಮನ್ಮಧ್ವಸುಮಧ್ಯಮಾಮ್ ।
ಸಾಕ್ಷಾನ್ಮದ್ಗುರುಪರ್ಯಂತಾಂ ವಂದೇ ಗುರುಪರಂಪರಾಮ್ ॥

ಶ್ರೀಮದ್ಧಂಸಂ ವಿಧಾತಾರಂ ಸನಕಾದಿಗುರೂನಪಿ ।
ದೂರ್ವಾಸಸಂ ಜ್ಞಾನನಿಧಿಂ ಖಗವಾಹನಸಂಜ್ಞಿತಮ್ ॥

ಕೈವಲ್ಯತೀರ್ಥಂ ಜ್ಞಾನೇಶಂ ಪರತೀರ್ಥಗುರುಂ ತಥಾ ।
ಸತ್ಯಪ್ರಜ್ಞಗುರುಂ ಪ್ರಾಜ್ಞಂ ಚಾನ್ಯಾನ್ ಸನಕವಂಶಜಾನ್ ॥

ನತ್ವಾಽಚ್ಯುತಪ್ರೇಕ್ಷತೀರ್ಥಂ ಮಧ್ವತೀರ್ಥಸ್ಯ ಸದ್ಗುರುಮ್ ।
ಶ್ರೀಮದ್ಭತೀರ್ಥನಾಮಾನಂ ಭಾಷ್ಯಕಾರಂ ಭಜೇಽನಿಶಮ್ ॥

ಬ್ರಹ್ಮಾಂತಾ ಗುರವಃ ಸಾಕ್ಷಾದಿಷ್ಟಂ ದೈವಂ ಶ್ರಿಯಃ ಪತಿಃ ।
ಆಚಾರ್ಯಾಃ ಶ್ರೀಮದಾಚಾರ್ಯಾಸ್ಸಂತು ಮೇ ಜನ್ಮಜನ್ಮನಿ ॥

ಪೂರ್ಣಪ್ರಜ್ಞಕೃತಂ ಭಾಷ್ಯಮಾದೌ ತದ್ಭಾವಪೂರ್ವಕಮ್ ।
ಯೋ ವ್ಯಾಕರೋನ್ನಮಸ್ತಸ್ಮೈ ಪದ್ಮನಾಭಾಖ್ಯಯೋಗಿನೇ ॥

ಸಸೀತಾಮೂಲರಾಮಾರ್ಚಾ ಕೋಶೇ ಗಜಪತೇಃ ಸ್ಥಿತಾ ।
ಯೇನಾನೀತಾ ನಮಸ್ತಸ್ಮೈ ಶ್ರೀಮನ್ನೃಹರಿಭಿಕ್ಷವೇ ॥

ಸಾಧಿತಾಖಿಲಸತ್ತತ್ತ್ವಂ ಬಾಧಿತಾಖಿಲದುರ್ಮತಮ್ ।
ಬೋಧಿತಾಖಿಲಸನ್ಮಾರ್ಗಂ ಮಾಧವಾಖ್ಯಯತಿಂ ಭಜೇ ॥

ಯೋ ವಿದ್ಯಾರಣ್ಯವಿಪಿನಂ ತತ್ವಮಸ್ಯಸಿನಾಽಚ್ಛಿನತ್ ।
ಶ್ರೀಮದಕ್ಷೋಭ್ಯತೀರ್ಥಾಯ ನಮಸ್ತಸ್ಮೈ ಮಹಾತ್ಮನೇ ॥

ಯಸ್ಯ ವಾಕ್ಕಾಮಧೇನುರ್ನಃ ಕಾಮಿತಾರ್ಥಾನ್ದುಯಚ್ಛತಿ ।
ಸೇವೇ ತಂ ಜಯಯೋಗೀಂದ್ರಂ ಕಾಮಬಾಣಚ್ಛಿದಂ ಸದಾ ॥

ಮಾದ್ಯದದ್ವೈತ್ಯಂಧಕಾರಪ್ರದ್ಯೋತನಮಹರ್ನಿಶಮ್ ।
ವಿದ್ಯಾಧಿರಾಜಂ ಸುಗುರುಂ ಹೃದ್ಯಾಮಿತಗುರುಂ ಭಜೇ ॥

ವೀಂದ್ರಾರೂಢಪದಾಸಕ್ತಂ ರಾಜೇಂದ್ರಮುನಿಸೇವಿತಮ್ ।
ಶ್ರೀಕವೀಂದ್ರಮುನಿಂ ವಂದೇ ಭಜತಾಂ ಚಂದ್ರಸನ್ನಿಭಮ್ ॥

ವಾಸುದೇವಪದದ್ವಂದ್ವವಾರಿಜಾಸಕ್ತಮಾನಸಮ್ ।
ಪದವ್ಯಾಖ್ಯಾನಕುಶಲಂ ವಾಗೀಶಯತಿಮಾಶ್ರಯೇ ॥

ದ್ಯುಮಣ್ಯಭಿಜನಾಬ್ಧೀಂದೂ ರಾಮವ್ಯಾಸಪದಾರ್ಚಕಃ ।
ರಾಮಚಂದ್ರಗುರುರ್ಭೂಯಾತ್ಕಾಮಿತಾರ್ಥಪ್ರದಾಯಕಃ ॥

ಆಕೇರಲಂ ತಥಾಽಸೇತುಮಾಗಂಗಂ ಚಾಹಿಮಾಲಯಮ್ ।
ನಿರಾಕೃತಾದ್ವೈತಶೈವಂ ವಿಬುಧೇಂದ್ರಗುರುಂ ಭಜೇ ॥

ಸಪ್ತರಾತ್ರಂ ಕೃಷ್ಣವೇಣ್ಯಾಮುಷಿತ್ವಾ ಪುನರುತ್ಥಿತಮ್ ।
ಜಿತಾಮಿತ್ರಗುರುಂ ವಂದೇ ವಿಬುಧೇಂದ್ರಕರೋದ್ಭವಮ್ ॥

ಪರೈರಪಹೃತಾಮೂಲರಾಮಾರ್ಚಾ ಗುರ್ವನುಗ್ರಹಾತ್ ।
ಯೇನಾನೀತಾ ನಮಸ್ತಸ್ಮೈ ರಘುನಂದನಭಿಕ್ಷವೇ ॥

ಯಶ್ಚಕಾರೋಪವಾಸೇನ ತ್ರಿವಾರಂ ಭೂಪ್ರದಕ್ಷಿಣಮ್ ।
ತಸ್ಮೈ ನಮೋ ಯತೀಂದ್ರಾಯ ಶ್ರೀಸುರೇಂದ್ರತಪಸ್ವಿನೇ ॥

ಭಕ್ತಾನಾಂ ಮಾನಸಾಂಭೋಜಭಾನವೇ ಕಾಮಧೇನವೇ ।
ನಮತಾಂ ಕಲ್ಪತರವೇ ಜಯೀಂದ್ರಗುರವೇ ನಮಃ ॥

ಕುಶಾಗ್ರಮತಯೇ ಭಾನುದ್ಯುತಯೇ ವಾದಿಭೀತಯೇ ।
ಆರಾಧಿತಶ್ರೀಪತಯೇ ಸುಧೀಂದ್ರಯತಯೇ ನಮಃ ॥

ದುರ್ವಾದಿಧ್ವಾಂತರವಯೇ ವೈಷ್ಣವೇಂದೀವರೇಂದವೇ ।
ಶ್ರೀರಾಘವೇಂದ್ರಗುರವೇ ನಮೋಽತ್ಯಂತದಯಾಲವೇ ॥

ಸಾಂದ್ರಬೋಧಾಯ ಶಾಸ್ತ್ರೇಷು ನಿಸ್ತಂದ್ರಮನಸೇ ಹರೌ ।
ರಾಘವೇಂದ್ರಕುಮಾರಾಯ ನಮೋ ಯೋಗೀಂದ್ರಯೋಗಿನೇ ॥

ರಾಘವೇಂದ್ರಾರ್ಪಿತಧಿಯೇ ಯೋಗೀಂದ್ರಾರ್ಪಿತಸೂನವೇ ।
ಶ್ರೀಮತ್ಸೂರೀಂದ್ರಯತಯೇ ಸುತಪೋನಿಧಯೇ ನಮಃ ॥

ಪೂರ್ಣಪ್ರಜ್ಞಮತಾಂಭೋಧಿಪೂರ್ಣೇಂದುಮಕಲಂಕಿನಮ್ ।
ಸುಜನಾಂಬುಧಿಭಾಸ್ವಂತಂ ಸುಮತೀಂದ್ರಗುರುಂ ಭಜೇ ॥

ಕೃಪಾರಸಾಮೃತಾಂಭೋಧಿಮಪಾರಮಹಿಮಾನ್ವಿತಮ್ ।
ಉಪಾಸ್ಮಹೇ ತಪೋಮೂರ್ತಿಮುಪೇಂದ್ರಗುರುಪುಂಗವಮ್ ॥

ವಂದಾರುಜನಸಂದೋಹಮಂದಾರತರುಸನ್ನಿಭಮ್ ।
ವೃಂದಾರಕಗುರುಪ್ರಖ್ಯಂ ವಂದೇ ವಾದೀಂದ್ರದೇಶಿಕಮ್ ॥

ವಸುಧಾತಲವಿಖ್ಯಾತಂ ವೈರಾಗ್ಯಾದಿಗುಣಾರ್ಣವಮ್ ।
ವೇದವೇದಾಂಗಚತುರಂ ವಸುಧೇಂದ್ರಗುರುಂ ಭಜೇ ॥

ವಾದೇ ವಿಜಯಶೀಲಾಯ ವರದಾಯ ವರಾರ್ಥಿನಾಮ್ ।
ವದಾನ್ಯಜನಸಿಂಹಾಯ ವರದೇಂದ್ರಾಯ ತೇ ನಮಃ ॥

ಧರಣೀಮಂಡಲೇ ಖ್ಯಾತಂ ಧೈರ್ಯಾದಿಗುಣಬೃಂಹಿತಮ್ ।
ಧಿಕ್ಕೃತಾಶೇಷವಾದೀಭಂ ಧೀರಸಿಂಹಗುರುಂ ಭಜೇ ॥

ಭೂದೇವವಂದ್ಯಪಾದಾಬ್ಜಂ ಭೂತಿಮಂತಮಭೀಷ್ಟದಮ್ ।
ಭೂತಲೇ ಸಾಧು ವಿಖ್ಯಾತಂ ಭುವನೇಂದ್ರಗುರುಂ ಭಜೇ ॥

ಸುಧಾಸೇವಾಸಮುದ್ಭೂತಸುಖಸಂವಿತ್ಸಮಾಶ್ರಯಮ್ ।
ಸುಜನಾಭೀಷ್ಟದಾತಾರಂ ಸುಬೋಧೇಂದ್ರಗುರುಂ ಭಜೇ ॥

ಸುಯುಕ್ತಿಜಾಲಸಹಿತಂ ಸುಜನಾಮೋದಕಾರಿಣಮ್ ।
ಸುರೋತ್ತಮಗುರುಪ್ರಖ್ಯಂ ಸುಜನೇಂದ್ರಗುರುಂ ಭಜೇ ॥

ಸುಧಾಸಾರಾರ್ಥತತ್ತ್ವಜ್ಞಂ ಸುರದ್ರುಮಸಮಂ ಸತಾಮ್ ।
ಸುರಾಧಿಪಗುರುಪ್ರಖ್ಯಂ ಸುಜ್ಞಾನೇಂದ್ರಗುರುಂ ಭಜೇ ॥

ಸುಧಾಂಶುಮಿವ ಸಂಭೂತಂ ಸುಜ್ಞಾನೇಂದ್ರಸುಧಾಂಬುಧೌ ।
ಸುಧೀಸಂದೋಹಸಂಸೇವ್ಯಂ ಸುಧರ್ಮೇಂದ್ರಗುರುಂ ಭಜೇ ॥

ಸುಧರ್ಮೇಂದ್ರಕರಾಬ್ಜೋತ್ಥಂ ಸುವಿದ್ವನ್ಮಣಿರಾಜಿತಮ್ ।
ಸುಮೃಷ್ಟಾನ್ನಪ್ರದಾತಾರಂ ಸುಗುಣೇಂದ್ರಗುರುಂ ಭಜೇ ॥

ಸುಧಾಜಿಜ್ಞಾಸಯಾ ಸರ್ವಸುಬುಧಾನಂದದಾಯಕಾನ್ ।
ಸುಪ್ರಜ್ಞೇಂದ್ರಮುನೀನ್ ವಂದೇ ಸದಾ ವಿದ್ಯಾಗುರೂನ್ಮಮ ॥

ಸುವಿದ್ವತ್ಕಮಲೋಲ್ಲಾಸಮಾರ್ತಾಂಡಂ ಸುಗುಣಾಕರಮ್ ।
ಸಚ್ಛಾಸ್ತ್ರಾಸಕ್ತಹೃದಯಂ ಸುಕೃತೀಂದ್ರಗುರುಂ ಭಜೇ ॥

ಸುಧಾದ್ಯಮಲಸದ್ಬೋಧಂ ಸುಕೀರ್ತಿವಿಲಸದ್ದಿಶಮ್ ।
ಸುಧೀಸಂಸ್ತುತ್ಯಸುಗುಣಂ ಸುಶೀಲೇಂದ್ರಗುರುಂ ಭಜೇ ॥

ಸುಶೀಲೇಂದ್ರಕರಾಬ್ಜೋತ್ಥಂ ಸುಶಾಂತ್ಯಾದಿಗುಣಾರ್ಣವಮ್ ।
ಸುಧಾಪ್ರವಚನಾಸಕ್ತಂ ಸುವ್ರತೀಂದ್ರಗುರುಂ ಭಜೇ ॥

ಸುಖತೀರ್ಥಮತಾಬ್ಧೀಂದುಂ ಸುಧೀಂದ್ರಸುತಸೇವಕಮ್ ।
ಸುಧಾಪರಿಮಳಾಸಕ್ತಂ ಸುಯಮೀಂದ್ರಗುರುಂ ಭಜೇ ॥

ಸುಯಮೀಂದ್ರಕರಾಬ್ಜೋತ್ಥಂ ಸುವಿದ್ಯಾಬೋಧಕಂ ಸದಾ ।
ಸುಮೂಲರಾಮಪೂಜಾಢ್ಯಂ ಸುಜಯೀಂದ್ರಗುರುಂ ಭಜೇ ॥

ಸುಧೀಜನಸುಮಂದಾರಂ ಸುಧೀಂದ್ರಸುತಸುಪ್ರಿಯಮ್ ।
ಸುಶಮೀಂದ್ರಗುರುಂ ವಂದೇ ಸುಜಯೀಂದ್ರಕರೋದ್ಭವಮ್ ॥

ಸುಶಮೀಂದ್ರಕರಾಬ್ಜೋತ್ಥಂ ರಾಘವೇಂದ್ರಗುರುಪ್ರಿಯಮ್ ।
ಸುಯತೀಂದ್ರಗುರುಂ ವಂದೇ ಮೂಲರಾಮಾರ್ಚನೇ ರತಮ್ ॥

ಕಂಸಧ್ವಂಸಿಪದಾಂಭೋಜಸಂಸಕ್ತೋ ಹಂಸಪುಂಗವಃ।
ಬ್ರಹ್ಮಣ್ಯಗುರುರಾಜಾಖ್ಯೋ ವರ್ತತಾಂ ಮಮ ಮಾನಸೇ ॥
ಪದವಾಕ್ಯಪ್ರಮಾಣಾಬ್ಧಿವಿಕ್ರೀಡನವಿಶಾರದಾನ್।
ಲಕ್ಷ್ಮೀನಾರಾಯಣಮುನೀನ್ ವಂದೇ ವಿದ್ಯಾಗುರೂನ್ಸದಾ ॥
ಅರ್ಥಿಕಲ್ಪಿತಕಲ್ಪೋಽಯಂ ಪ್ರತ್ಯರ್ಥಿಗಜಕೇಸರೀ।
ವ್ಯಾಸತೀರ್ಥಗುರುರ್ಭೂಯಾದಸ್ಮದಿಷ್ಟಾರ್ಥಸಿದ್ಧಯೇ ॥
ಕಾಮಧೇನುರ್ಯಥಾಪೂರ್ವಂ ಸರ್ವಾಭೀಷ್ಟಫಲಪ್ರದಾ।
ತಥಾ ಕಲೌ ವಾದಿರಾಜಶ್ರೀಪಾದೋಽಭೀಷ್ಟದಃ ಸತಾಮ್ ॥
ಯದನುಗ್ರಹಮಾತ್ರೇಣ ಪೂರ್ಣೋಽಹಂ ಸರ್ವಸಂಪದಾ।
ಯಾದವೇಂದ್ರಮುನೀನ್ವಂದೇ ಮಮ ವಿದ್ಯಾಗುರೂನ್ಸದಾ ॥
ರಾಮಪಾದಾಂಬುಜಾಸಕ್ತಂ ರಾಘವೇಂದ್ರಗುರುಪ್ರಿಯಮ್।
ಮುನೀಂದ್ರಯೋಗಿನಂ ಸೇವೇ ಕಾಮಿತಾರ್ಥಪ್ರದಾಯಕಮ್ ॥
ಪ್ರಕಟೀಕೃತಟೀಕೋಕ್ತಿರ್ಮರ್ಕಟೀಕೃತಮಾಯಿರಾಟ್।
ಚರ್ಕೃತಾದ್ವ್ಯಸತತ್ತ್ವಜ್ಞಮಸ್ಕರೀಂದ್ರಃ ಕೃಪಾಂ ಮಯಿ ॥
ಮನ್ಮನೋಽಭೀಷ್ಟವರದಂ ಸರ್ವಾಭೀಷ್ಟಫಲಪ್ರದಮ್।
ಪುರಂದರಗುರುಂ ವಂದೇ ದಾಸಶ್ರೇಷ್ಠಂ ದಯಾನಿಧಿಮ್ ॥
ಅಜ್ಞಾನತಿಮಿರಚ್ಛೇದಂ ಬುದ್ಧಿಸಂಪತ್ತ್ರದಾಯಕಮ್।
ವಿಜ್ಞಾನವಿಮಲಂ ಶಾಂತಂ ವಿಜಯಾಖ್ಯಗುರುಂ ಭಜೇ ॥
ಭೂಪಾಲನತಪಾದಾಬ್ಜಂ ಪಾಪಾಲಿಪರಿಹಾರಿಣಮ್।
ಗೋಪಾಲದಾಸಮೀಡೇಽಹಂ ಗೋಪಾಲಹರಿದರ್ಶನಮ್ ॥
ಜಲಜೇಷ್ಟನಿಭಾಕಾರಂ ಜಗದೀಶಪದಾಶ್ರಯಮ್।
ಜಗತೀತಲವಿಖ್ಯಾತಂ ಜಗನ್ನಾಥಗುರುಂ ಭಜೇ ॥
ನಿತ್ಯೋತ್ಸವೋ ಭವೇತ್ತೇಷಾಂ ನಿತ್ಯಶ್ರೀರ್ನಿತ್ಯಮಂಗಳಮ್।
ಯೇಷಾಂ ಹೃದಿಸ್ಥೋ ಭಗವಾನ್ಮಂಗಳಾಯತನಂ ಹರಿಃ ॥

॥ ಸಮಸ್ತಸನ್ಮಂಗಳಾನಿ ಭವಂತು ॥

❖ ❖ ❖

॥ಶ್ರೀಗುರುಪರಂಪರಾ ದಂಡಕಂ॥

ಶ್ರೀಮದ್ಪದ್ಮನಾಭಂ ನರಹರಿಮುನಿಪಂ ಮಾಧವಾಕ್ಷೋಭ್ಯತೀರ್ಥೌ
ವಂದೇ ಶ್ರೀಮಜ್ಜಯಾರ್ಯಂ ಮುನಿವರಮಥ ವಿದ್ಯಾಧಿರಾಜಂ ಕವೀಂದ್ರಮ್।
ವಾಗೀಶಂ ರಾಮಚಂದ್ರಂ ಶ್ರುತಗುಣವಿಬುಧೇಂದ್ರಂ ಜಿತಾಮಿತ್ರವರ್ಯಂ
ರಕ್ಷಾಶಿಕ್ಷೈಕದಕ್ಷೌ ರಘುತನಯಸುರೇಂದ್ರೌ ಜಯೀಂದ್ರಂ ಸುಧೀಂದ್ರಮ್॥ ೧ ॥

ಶ್ರೇಷ್ಠಂ ಶ್ರೀರಾಘವೇಂದ್ರಂ ಸಕಲಗುಣನಿಧಿಂ ಧೀರಯೋಗೀಂದ್ರತೀರ್ಥಂ
ಸೂರೀಂದ್ರಂ ಸದ್ಗುಣಾಢ್ಯಂ ರಘುಪತಿಚರಣಧ್ಯಾನಧೂತಾಘಸಂಘಮ್।
ಶ್ರೀರಾಮವ್ಯಾಸಪೂಜಾಮಿತಮತಿಸುಮತೀಂದ್ರಾಭಿಧಂ ಸಂಯಮೀಂದ್ರಂ
ಭಕ್ತ್ಯಾ ಪ್ರಸ್ತೌಮ್ಯಪೇಂದ್ರಂ ಗುರುವರಮಪಿ ಮೇ ಪ್ರೌಢವಾದೀಂದ್ರವರ್ಯಮ್॥ ೨ ॥

-ಶ್ರೀವಸುಧೇಂದ್ರತೀರ್ಥಕೃತಂ

ಶ್ರೀಭೂಜಾಕಾಂತಪೂಜಾರತಯತಿವಸುಧೇಂದ್ರಾಭಿಧಂ ಮೇದಿನೀಂದ್ರಂ
ಕ್ಷೋಣೀಪೇವಿಖ್ಯಾತಕೀರ್ತಿಂ ಯತಿವರವರದೇಂದ್ರಂ ಭಜೇ ವಾದಿಸಿಂಹಮ್।
ಭಕ್ತೇಷ್ಟಾರ್ಥಪ್ರದಾನದ್ಯುಮಣಿಜಭುವನೇಂದ್ರಂ ರಸಾಕಲ್ಪಭೂಜಂ
ದುರ್ವಾದೀಂದ್ರೇಭಗರ್ವಪ್ರವಿದಲನಹರಿಂ ಶ್ರೀಸುಬೋಧೇಂದ್ರಮೀಡೇ ॥
ಶ್ರೀಮತ್ಸಿದ್ಧಾಂತಪಾಥೋನಿಧಿವಿಧುಸುಜನೇಂದ್ರಂ ವ್ರತೀಂದ್ರಾಗ್ರಗಣ್ಯಂ
ಸುಜ್ಞಾನೇಂದ್ರಂ ಕೃತೀಂದ್ರೇಕ್ಷಣಕುಮುದಮೃಗಾಂಕಂ ಸುಧರ್ಮೇಂದ್ರಮಾರ್ಯಮ್।
ವಂದೇ ವಿದ್ವಚ್ಚಕೋರದ್ವಿಜವರಸುಗುಣೇಂದ್ರಾಭಿಧಂ ಮೌನಿವರ್ಯಂ
ಸುಪ್ರಜ್ಞೇಂದ್ರಂ ಪರಿವ್ರಾಡ್ವರಮಥ ಸುಕೃತೀಂದ್ರಂ ಶ್ರುತೀಂದ್ರಾಭಿವಂದ್ಯಮ್ ॥
ಮೂಲೇಲಾಜಾಕಲತ್ರಾಂಘ್ರಿಜಲಜಭಜಕೇಷ್ಟಂ ಸುಶೀಲೇಂದ್ರವರ್ಯಮ್।
ಜ್ಞಾನೀಂದ್ರಂ ಸುವ್ರತೀಂದ್ರಂ ಪರಿಮಳಗುರುರಾಡಂಘ್ರಿಕಂಜಾಲಿಲೀಲಮ್॥

-ಶ್ರೀಸುಯಮೀಂದ್ರತೀರ್ಥಕೃತಂ.

ಶ್ರೀಶಂ ಶ್ರೀಮೂಲರಾಮಂ ಭಜಕಸುರತರುಂ ರಾಘವೇಂದ್ರಂ ಚ ಭಕ್ತ್ಯಾ
ಸಂಪೂಜ್ಯಾನಂದಪಾತ್ರಂ ಸುಯಮಿಗುರುವರಂ ನೌಮಿ ಸದ್ಭಕ್ತಿಪೂರ್ವಮ್।
ವಂದೇ ಸತ್ತತ್ತ್ವಭೋಧಂ ಸುಜಯಯತಿವರಂ ಮಂತ್ರಪೂರ್ವಾದ್ಧಿಕಾರಂ
ಭಕ್ತ್ಯಾ ಪ್ರಸ್ತೌಮಿ ಧನ್ಯೌ ಸುಶಮಿಸುಯತಿನೌ ರಾಘವೇಂದ್ರೇತಿನಿಷ್ಠೌ ॥

-ಶ್ರೀಸುಬುಧೇಂದ್ರತೀರ್ಥಕೃತಂ.

ಮಂಗಳಾಚರಣಂ

ಯೇನಾಖಂಡಿಮುದೈವಖಂಡಪರಶೋರುದ್ದಂಡಕಾಂಡಾಸನಂ
ಭೂದೇವೀತನಯಾಪ್ಯಲಾಭಿ ಸರಸೈರಂಗೈರಪಾಂಗೈರಪಿ ॥

ಸದ್ಧರ್ಮದ್ಯುತಿಹರ್ಮ್ಯನಿರ್ಮಿತಲಸನ್ನರ್ಮೋತ್ಥಶರ್ಮೋದಯಃ।
ಶ್ರೀರಾಮೋ ಮಮ ಮಾನಸೇ ವಿಲಸತಾತ್ ಸೀತಾಸಹಾಯಸ್ಸದಾ ॥

ಪಾಹಿ ಮಾಂ ವೇಂಕಟಾಧೀಶ ಪ್ರಣತಾಮರ ಭೂರುಹ।
ಭಕ್ತಬಂಧೋ ದಯಾಸಿಂಧೋ ಸತತಂ ತೇ ನಮೋ ನಮಃ ॥

ಅಚಿಂತ್ಯಾವ್ಯಕ್ತರೂಪಾಯ ನಿರ್ಗುಣಾಯ ಗುಣಾತ್ಮನೇ।
ಸಮಸ್ತಜಗದಾಧಾರಮೂರ್ತಯೇ ಬ್ರಹ್ಮಣೇ ನಮಃ ॥

ಕಲ್ಮಷಖಂಡನಶೀಲೇ ರಮ್ಯಕಪೋಲೇ ಸರೋಜಮುಖಿ ಸುತನೋ।
ಅಮ್ಲಾನಪದ್ಮಹಸ್ತೇ ನಿರ್ಮಲಮಚ್ಚಕ್ಷುರೀಕ್ಷತಾಂ ಚ ಕೃಷ್ಣಮ್ ॥

ಶ್ರೀಮದ್ರಾಮಾಭಿರಾಮಾಮಿತಮಹಿಮಪದಪ್ರೌಢಪಾಥೋರುಹಾಲಿಃ
ಕೃಷ್ಣಾನಿಷ್ಕಾಮಿತಕ್ಷ್ಮಾಪರಿವೃಢಪಟಲೀ ಪಾಟನೈಕಪ್ರವೀಣಃ।
ವೇದವ್ಯಾಸೋಪದೇಶಾಧಿಕಸಮಧಿಗತಾನಂತವೇದಾಂತಭಾವೋ
ಭೂಯಾತ್ಕೀಶಾವನೀಶವ್ರತಿತನುರನಿಲಃ ಶ್ರೇಯಸೇ ಭೂಯಸೇ ನಃ ॥

ಅಗಜಾನನಪದ್ಮಾರ್ಕಂ ಗಜಾನನಮಹರ್ನಿಶಮ್।
ಅನೇಕದಂತಂ ಭಕ್ತಾನಾಂ ಏಕದಂತಮುಪಾಸ್ಮಹೇ ॥

ಶ್ರೀರಾಘವೇಂದ್ರತೀರ್ಥಾರ್ಯಚರಣಾಮರಭೂರುಹಮ್।
ಕಾಮಿತಾಶೇಷಕಲ್ಯಾಣಕಲನೋನ್ಮುಖಿಮಾಶ್ರಯೇ ॥

ಆಪಾದಮೌಳಿಪರ್ಯಂತಂ ಗುರೂಣಾಮಾಕೃತಿಂ ಸ್ಮರೇತ್।
ತೇನ ವಿಘ್ನಾಃ ಪ್ರಣಶ್ಯಂತಿ ಸಿದ್ಧ್ಯಂತಿ ಚ ಮನೋರಥಾಃ ॥

❖❖❖

॥ ಶ್ರೀಮನ್ಮೂಲರಾಮೋ ವಿಜಯತೇ ॥
॥ ಶ್ರೀಗುರುರಾಜೋ ವಿಜಯತೇ ॥

॥ ಶ್ರೀರಾಘವೇಂದ್ರಮಂಗಳಾಷ್ಟಕಮ್ ॥

ಶ್ರೀಮದ್ರಾಮಪದಾರವಿಂದಮಧುಪಃ ಶ್ರೀಮದ್ಧವಂಶಾಧಿಪಃ
ಸಚ್ಛಿಷ್ಯೋಡುಗಣೋಡುಪಃ ಶ್ರಿತಜಗದ್ಗೀರ್ವಾಣಸತ್ಪಾದಪಃ।
ಅತ್ಯರ್ಥಂ ಮನಸಾ ಕೃತಾಚ್ಯುತಜಪಃ ಪಾಪಾಂಧಕಾರಾತಪಃ
ಶ್ರೀಮತ್ಸದ್ಗುರುರಾಘವೇಂದ್ರಯತಿರಾಟ್ ಕುರ್ಯಾದ್ಧ್ರುವಂ ಮಂಗಳಮ್ ॥

ಕರ್ಮಂದೀಂದ್ರಸುಧೀಂದ್ರಸದ್ಗುರುಕರಾಂಭೋಜೋದ್ಭವಃ ಸಂತತಂ
ಪ್ರಾಜ್ಯಧ್ಯಾನವಶೀಕೃತಾಖಿಲಜಗದ್ವಾಸ್ತವ್ಯಲಕ್ಷ್ಮೀಧವಃ।
ಸಚ್ಛಾಸ್ತ್ರಾತಿವಿದೂಷಕಾಖಿಲಮೃಷಾ ವಾದೀಭಕಂಠೀರವಃ
ಶ್ರೀಮತ್ಸದ್ಗುರುರಾಘವೇಂದ್ರಯತಿರಾಟ್ ಕುರ್ಯಾದ್ಧ್ರುವಂ ಮಂಗಳಮ್ ॥

ಸಾಲಂಕಾರಕಕಾವ್ಯನಾಟಕಕಲಾ ಕಾಣಾದಪಾತಂಜಲ
ತ್ರೈಯ್ಯರ್ಥಸ್ಫೂರ್ತಿ ಜೈಮಿನೀಯಕವಿತಾಸಂಗೀತಪಾರಂಗತಃ।
ವಿಪ್ರಕ್ಷತ್ರವಿಡಂಘ್ರಿಜಾತಮುಖರಾನೇಕಪ್ರಜಾಸೇವಿತಃ
ಶ್ರೀಮತ್ಸದ್ಗುರುರಾಘವೇಂದ್ರಯತಿರಾಟ್ ಕುರ್ಯಾದ್ಧ್ರುವಂ ಮಂಗಳಮ್ ॥

ರಂಗೋತ್ತುಂಗತರಂಗಮಂಗಲಕರಶ್ರೀತುಂಗಭದ್ರಾತಟ–
ಪ್ರತ್ಯಸ್ಥದ್ವಿಜಪುಂಗವಾಲಯಲಸನ್ಮಂತ್ರಾಲಯಾಖ್ಯೇ ಪುರೇ।
ನವ್ಯೇಂದ್ರೋಪಲನೀಲಭವ್ಯಕರಸದ್ವೃಂದಾವನಾಂತರ್ಗತಃ
ಶ್ರೀಮತ್ಸದ್ಗುರುರಾಘವೇಂದ್ರಯತಿರಾಟ್ ಕುರ್ಯಾದ್ಧ್ರುವಂ ಮಂಗಳಮ್ ॥

ವಿದ್ವದ್ರಾಜಶಿರಃಕಿರೀಟಖಚಿತಾನರ್ಘ್ಯೋರುರತ್ನಪ್ರಭಾ
ರಾಗಾಫ್ಘೌಘಪಾದುಕದ್ವಯಚರಃ ಪದ್ಮಾಕ್ಷಮಾಲಾಧರಃ।
ಭಾಸ್ವದ್ದಂಡಕಮಂಡಲೂಜ್ಜ್ವಲಕರೋ ರಕ್ತಾಂಬರಾಡಂಬರಃ
ಶ್ರೀಮತ್ಸದ್ಗುರುರಾಘವೇಂದ್ರಯತಿರಾಟ್ ಕುರ್ಯಾದ್ಧ್ರುವಂ ಮಂಗಳಮ್ ॥

॥ ಶ್ರೀಗುರುರಾಜೋ ವಿಜಯತೇ ॥

ಶ್ರೀಗುರುಸಾರ್ವಭೌಮರ
ಆರಾಧನಾ ಸಪ್ತಾಹ ಕಾರ್ಯಕ್ರಮಗಳು

10–08–2022
ಬುಧವಾರ
ಧ್ವಜಾರೋಹಣ, ಪ್ರಾರ್ಥನೋತ್ಸವ,
ಪ್ರಭಾ ಉತ್ಸವ, ಧಾನ್ಯೋತ್ಸವಾದಿಗಳು

11–08–2022
ಗುರುವಾರ
ಶಾಕೋತ್ಸವ,
ರಜತಮಂಟಪೋತ್ಸವಾದಿಗಳು

12–08–2022
ಶುಕ್ರವಾರ
ಪೂರ್ವಾರಾಧನೆ,
ಸಿಂಹವಾಹನಾದಿಗಳು

13–08–2022
ಶನಿವಾರ
ಮಧ್ಯಾರಾಧನೆ
ರಾತ್ರಿ ಗಜ, ರಜತ, ಸ್ವರ್ಣರಥೋತ್ಸವ

14–08–2022
ರವಿವಾರ
ಉತ್ತರಾರಾಧನೆ
ಪ್ರಾತಃ ಮಹಾ ರಥೋತ್ಸವ

15–08–2022
ಸೋಮವಾರ
ಅಶ್ವವಾಹನಾದಿಗಳು

16–08–2022
ಮಂಗಳವಾರ
ಸರ್ವಸಮರ್ಪಣೋತ್ಸವ
॥ ಮಂಗಳಂ ॥

ಯದ್ವೃಂದಾವನಸಪ್ರದಕ್ಷಿಣನಮಸ್ಕಾರಾಭಿಷೇಕಸ್ತುತಿ
ಧ್ಯಾನಾರಾಧನಮೃದ್ವಿಲೇಪನಮುಖಾನೇಕೋಪಚಾರಾನ್ಸದಾ।
ಕಾರಂಕಾರಮಭಿಪ್ರಯಾಂತಿ ಚತುರೋ ಲೋಕಾಃಪುಮರ್ಥಾನ್ಸದಾ
ಶ್ರೀಮತ್ಸದ್ಗುರುರಾಘವೇಂದ್ರಯತಿರಾಟ್ ಕುರ್ಯಾದ್ಧ್ರುವಂ ಮಂಗಳಮ್ ॥

ವೇದವ್ಯಾಸಮುನೀಶಮಧ್ವಯತಿರಾಟ್ಟೀಕಾರ್ಯವಾಕ್ಯಾಮೃತಂ
ಜ್ಞಾತ್ವಾದ್ವೈತಮತಂ ಹಲಾಹಲಸಮಂ ತ್ಯಕ್ತ್ವಾಸಮಾಖ್ಯಾಪ್ತಯೇ।
ಸಂಖ್ಯಾವತ್ಸುಖದಾಂ ದಶೋಪನಿಷದಾಂ ವ್ಯಾಖ್ಯಾಂ ಸಮಾಖ್ಯಾನ್ಮುದಾ
ಶ್ರೀಮತ್ಸದ್ಗುರುರಾಘವೇಂದ್ರಯತಿರಾಟ್ ಕುರ್ಯಾದ್ಧ್ರುವಂ ಮಂಗಳಮ್ ॥

ಶ್ರೀಮದ್ವೈಷ್ಣವಲೋಕಜಾಲಕಗುರುಃ ಶ್ರೀಮತ್ಪರಿವ್ರಾಡ್ವರಃ
ಶಾಸ್ತೇ ದೇವಗುರುಃಶ್ರಿತಾಮರತರುಃಪ್ರತ್ಯೂಹಗೋತ್ರಸ್ವರುಃ।
ಚೇತೋsತೀತಶಿರುಸ್ತಥಾ ಜಿತವರುಃ ಸತ್ಸೌಖ್ಯಸಂಪತ್ಕರುಃ
ಶ್ರೀಮತ್ಸದ್ಗುರುರಾಘವೇಂದ್ರಯತಿರಾಟ್ ಕುರ್ಯಾದ್ಧ್ರುವಂ ಮಂಗಳಮ್ ॥

ಯಃ ಸಂಧ್ಯಾಸ್ವನಿಶಂ ಗುರೋರ್ವ್ರತಿಪತೇಃ ಸನ್ಮಂಗಳಸ್ಯಾಷ್ಟಕಂ
ಸದ್ಯಃ ಪಾಪಹರಂ ಸ್ವಸೇವಿ ವಿದುಷಾಂ ಭಕ್ತ್ಯೈವ ಬಾಭಾಷಿತಮ್।
ಭಕ್ತ್ಯಾವಕ್ತಿ ಸುಸಂಪದಂ ಶುಭಪದಂ ದೀರ್ಘಾಯುರಾರೋಗ್ಯಕಂ
ಕೀರ್ತಿಂ ಪುತ್ರಕಲತ್ರಬಾಂಧವಸುಹೃನ್ಮೂರ್ತಿಃ ಪ್ರಯಾತಿ ಧ್ರುವಮ್ ॥

॥ ಇತಿ ಶ್ರೀಮದಪ್ಪಣ್ಣಾಚಾರ್ಯಕೃತಂ ಗುರುರಾಜಾಷ್ಟಕಂ ಸಂಪೂರ್ಣಮ್ ॥

ಪೂಜ್ಯಾಯ ರಾಘವೇಂದ್ರಾಯ ಸತ್ಯಧರ್ಮರತಾಯ ಚ।
ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನವೇ ॥

ದುರ್ವಾದಿಧ್ವಾಂತರವಯೇ ವೈಷ್ಣವೇಂದೀವರೇಂದವೇ।
ಶ್ರೀರಾಘವೇಂದ್ರಗುರವೇ ನಮೋಽತ್ಯಂತದಯಾಲವೇ ॥

ಮೂಕೋಽಪಿ ಯತ್ಪ್ರಸಾದೇನ ಮುಕುಂದಶಯನಾಯತೇ।
ರಾಜರಾಜಾಯತೇ ರಿಕ್ತೋ ರಾಘವೇಂದ್ರಂ ತಮಾಶ್ರಯೇ ॥

ಆಪಾದಮೌಳಿಪರ್ಯಂತಂ ಗುರೂಣಾಮಾಕೃತಿಂ ಸ್ಮರೇತ್।
ತೇನ ವಿಘ್ನಾಃ ಪ್ರಣಶ್ಯಂತಿ ಸಿದ್ಧ್ಯಂತಿ ಚ ಮನೋರಥಾಃ ॥

***

ಶ್ರೀಸುಬುಧೇಂದ್ರತೀರ್ಥವಿರಚಿತಾ

ಶ್ರೀಜಯತೀರ್ಥಸ್ತುತಿಃ

ಯದ್ವೃಂದಾವನದರ್ಶನೇನ ದುರಿತಧ್ವಂಸೇನ ಸಂರಾಜತೇ
ಯತ್ತಾದೋದಕಸೇವನೇನ ಸುಜನಸ್ತೀರ್ಥೇಷು ಸಮ್ಮಜ್ಜತಿ ।
ಯದ್ಧಸ್ತೋದಕಭಕ್ಷಣೇನ ಸಕಲಾಭೀಷ್ಟಂ ಸಮಾಲಂಬತೇ
ತಂ ಸೇವೇ ಜಯತೀರ್ಥರಾಜಮನಿಶಂ ತುಂಗಾತಟೇ ರಾಜಿತಮ್ ॥ 1 ॥

ವಂದಾರುವೃಂದಪರಿಸೇವಿತಸಾಂದ್ರಮೋದಃ
ಇಂದ್ರಾಂಶಸದ್ಗುರುವರಃ ಪ್ರಣತೇಷ್ಟದೋಽಸೌ ।
ಮೋದಂ ಮುದಾ ದಿಶತಿ ಮಂದಮತೀನ್ವನಾತಿ
ವೃಂದಾವನಂ ಸಮಧಿತಿಷ್ಠತಿ ಸಜ್ಜಯಾರ್ಯಃ ॥ 2 ॥

ಶ್ರೀಮನ್ಮೂಲರಘೂದ್ವಹಾಂಘ್ರಿನಲಿನೇ ಭೃಂಗಾಯಿತಂ ಸಂತತಮ್
ದುರ್ವಾದಾಖ್ಯತಮಿಸ್ರಪರ್ವತದಲೇ ದೇವೇಂದ್ರವಜ್ರಾಯಿತಮ್ ।
ದುರ್ವ್ಯಾಖ್ಯಾನತಮೋನಿವಾರಣವಿಧೌ ಚಂದ್ರಸ್ಯ ಭಾಸಾಯಿತಮ್
ತಂ ಸೇವೇ ಗಜಗಹ್ವರಸ್ಥಯತಿನಂ ಶ್ರೀಮಜ್ಜಯಾರ್ಯಂ ಗುರುಮ್(ಶ್ರುತಮ್) ॥ 3 ॥

ಶ್ರೀಮನ್ನ್ಯಾಯಸುಧಾ ಯೇನ ಸೂದ್ಧೃತಾ ಶಾಸ್ತ್ರಸಿಂಧುತಃ ।
ಜಯತೀರ್ಥಗುರುಂ ನೌಮಿ ಸುಖತೀರ್ಥಾರ್ಯಪೀಠಗಮ್ ॥ 4 ॥

ಜಯತೀರ್ಥರವಿರ್ಭಾತಿ ನವವೃಂದಾವನೇ ಸದಾ ।
ತತ್ತ್ವಪ್ರಕಾಶಿಕಾಭಾವಂ ಪ್ರಕಟೀಕರ್ತುಮುದ್ಯತಃ ॥ 5 ॥

ಶ್ರೀಮೂಲರಾಮಪದಪಂಕಜಲೋಲಭೃಂಗ
ಶ್ರೀಮದ್ಭತತ್ತ್ವಮತವಾರ್ಧಿಸುವೃದ್ಧಿಚಂದ್ರ ।
ಶ್ರೀಕೋಲಸೂತಸರಿದಂತರಮೌನಿಸಂಗ
ಶ್ರೀಮಜ್ಜಯಾರ್ಯಗುರುರಾಡವ ಕಾಮಭಂಗ ॥ 6 ॥

ವೇದಾಂತವೇದ್ಯಹರಿಭಕ್ತಿಸುಧಾಂ ಸ್ರವಂತಮ್
ಸಂಸಾರಸಾಗರವಿರಾಗಧಿಯಂ ಕಿರಂತಮ್ ।
ಶ್ರುತ್ಯರ್ಥಸಾರಪರಿಚಿಂತನಬೋಧದಂ ತಮ್
ಟೀಕಾರ್ಯಸದ್ಗುರುವರಂ ಪ್ರಣತೋಽಸ್ಮಿ ನಿತ್ಯಮ್ ॥ 7 ॥

ಶ್ರೀಪದ್ಮನಾಭಗುರುವರ್ಯಸಮೀಪವಾಸಿನ್
ಶ್ರೀಮತ್ಕವೀಂದ್ರಯತಿಪೂಜಿತಪಾದಪದ್ಮ ।
ವಾಗೀಶತೀರ್ಥಪರಿಸೇವಿತಭವ್ಯರೂಪ
ಶ್ರೀಮಜ್ಜಯಾರ್ಯ ಮಮ ದೇಹಿ ತವಾಶು ದಾಸ್ಯಮ್ ॥ 8 ॥

ಯೋ ದುಶ್ಶಾಸ್ತ್ರತಮೋವಿಕರ್ತನಮಣಿರ್ಭರ್ಕೈಕಚಿಂತಾಮಣಿಃ
ತುಂಗಾಂಬೋಧಿತರಂಗಭೂಷಣಮಣಿಃ ಸನ್ಯಾಸಿಚೂಡಾಮಣಿಃ ।
ಭಾಷ್ಯಾದ್ಯರ್ಥಸುಬೋಧದೀಪಕಮಣಿರ್ದೇವೇಷು ಮುಖ್ಯೋ ಮಣಿಃ
ತುಷ್ಟೋ ಮಾಂ ಜಯರಾಜಶೇಖರಮಣಿಃ ಪಾಯಾದಪಾಯಾತ್ಸದಾ ॥ 9 ॥

ನಾನಾವೃತ್ತೈಶ್ಚೋಭಿತಂ ಶ್ರೀಜಯಾರ್ಯ–
ಸ್ತೋತ್ರಂ ದಿವ್ಯಂ ಗುಂಫಿತಂ ಸದ್ಬುಧೇಂದ್ರೈಃ ।
ಭಕ್ತ್ಯಾ ಯುಕ್ತೋ ಯಃ ಪಠೇದೇವ ನಿತ್ಯಮ್
ಸರ್ವಂ ಪ್ರಾಪ್ನೋತ್ಯೈಹಿಕಾಮುಷ್ಮಿಕಂ ಚ ॥ 10 ॥

ಶ್ರೀಸುಬುಧೇಂದ್ರತೀರ್ಥವಿರಚಿತಂ

ಶ್ರೀಜಯತೀರ್ಥಗುರುದಶಕಮ್

ಅಕ್ಷೋಭ್ಯಕರಸಂಜಾತಂ ವಾದಿವಿಕ್ಷೋಭಕಾರಿಣಮ್ ।
ಜಯತೀರ್ಥಗುರುಂ ವಂದೇ ಟೀಕಾಸಜ್ಜ್ಞಾನಸಿದ್ಧಯೇ ॥ 1 ॥

ವಾದೀಭವೈರಿಣಂ ಪೂರ್ಣಬೋಧತತ್ತ್ವಸುಬೋಧಕಮ್
ಜಯತೀರ್ಥಗುರುಂ ವಂದೇ ವೇದಾರ್ಥಜ್ಞಾನಸಿದ್ಧಯೇ ॥ 2 ॥

ಗಜಗಹ್ವರತೀರಸ್ಥಂ ರಾಜರಾಜಸುಪೂಜಿತಮ್
ಜಯತೀರ್ಥಗುರುಂ ವಂದೇ ಸಂತಾಪತ್ರಯಶಾಂತಯೇ ॥ 3 ॥

ಪದ್ಮನಾಭಕವೀಂದ್ರಾರ್ಯವಾಗೀಶಯತಿಸಮ್ಮುಖಿಮ್ ।
ಜಯತೀರ್ಥಗುರುಂ ವಂದೇ ಗೂಢತತ್ತ್ವಾರ್ಥಸಂವಿದೇ ॥ 4 ॥

ಶ್ರೀಮನ್ನ್ಯಾಯಸುಧಾಗ್ರಂಥಕರ್ತಾರಂ ಶ್ರೀಕರಂ ಗುರುಮ್ ।
ಜಯತೀರ್ಥಗುರುಂ ವಂದೇ ಸುಧಾತತ್ತ್ವಾರ್ಥಸಿದ್ಧಯೇ ॥ 5 ॥

ಮೂಲರಾಮಾರ್ಚಕಂ ವಂದೇ ಮಾಲೋಲಪದಸೇವಕಮ್ ।
ಜಯತೀರ್ಥಗುರುಂ ವಂದೇ ಸಚ್ಛಾಸ್ತ್ರಜ್ಞಾನಸಿದ್ಧಯೇ ॥ 6 ॥

ವರಾಹವದನೋದ್ಭೂತತುಂಗಾತೀರನಿವಾಸಿನಮ್ ।
ಜಯತೀರ್ಥಗುರುಂ ವಂದೇ ತೀರ್ಥಸ್ನಾನಫಲಾಪ್ತಯೇ ॥ 7 ॥

ಜಯರಾಮೇತಿ ವಿಖ್ಯಾತಶ್ರೀರಾಮಸ್ಥಾಪಕಂ ಮಠೇ ।
ಜಯತೀರ್ಥಗುರುಂ ವಂದೇ ಸರ್ವತ್ರ ಜಯಸಿದ್ಧಯೇ ॥ 8 ॥

ಶಿಷ್ಯಂ ವಿದ್ಯಾಧಿರಾಜಾಖ್ಯಮವಾಪ್ಯ ಮುದಸಂಗತಮ್ ।
ಜಯತೀರ್ಥಗುರುಂ ವಂದೇ ಸದ್ವಿದ್ಯಾಸಮವಾಪ್ತಯೇ ॥ 9 ॥

ಸುಬುಧೇಂದ್ರಕೃತಂ ಶ್ರೀಮಜ್ಜಯಾರ್ಯದಶಕಂ ಸ್ತವಮ್ ।
ಯಃ ಪಠೇತ್ ಶೃಣುಯಾದ್ವಾಪಿ ಸ ಯಾತಿ ಪರಮಾಂ ಗತಿಮ್ ॥ 10 ॥

ಸೂರ್ಯಸಿದ್ಧಾಂತ ಮತ್ತು ದೃಕ್ ಪಂಚಾಂಗಗಳ ವಿವರಣೆ

ನಾವು ಮಾಡುತ್ತಿರುವ ಎಲ್ಲಾ ಕರ್ಮಗಳಿಗೂ ಕಾಲವು ಪ್ರಧಾನಾಂಗವೆನಿಸುತ್ತದೆ. ವಿಹಿತಕಾಲದಲ್ಲಿ ಮಾಡುವ ಕರ್ಮವು ಶುಭಫಲವನ್ನು, ನಿಷಿದ್ಧಕಾಲದಲ್ಲಿ ಮಾಡುವ ಕರ್ಮವು ಅಶುಭಫಲವನ್ನು ಕೊಡುತ್ತದೆ. ಆದ್ದರಿಂದ ವಿಹಿತ ಕಾಲದಲ್ಲಿಯೇ ಶಾಸ್ತ್ರೋಕ್ತಕರ್ಮಗಳನ್ನು ಮಾಡಬೇಕು.

ಈ ಕಾಲವು 1) ತಿಥಿ, 2) ವಾರ, 3) ನಕ್ಷತ್ರ, 4) ಯೋಗ ಮತ್ತು 5) ಕರಣ ಎಂಬ ಐದು ಅಂಗಗಳಿಂದ ಯುಕ್ತವಾಗಿದೆ. ವರ್ಷಾರಂಭದ ದಿನದಿಂದ ಆರಂಭಿಸಿ ವರ್ಷಾಂತ್ಯದವರೆಗಿನ ಎಲ್ಲಾ ದಿನಗಳಲ್ಲಿ ವಿಹಿತವಾದ ಸ್ನಾನ, ದಾನ, ಜಪ, ತರ್ಪಣ ಮುಂತಾದ ಕಾರ್ಯಗಳು ಕಾಲಾಂತರದಲ್ಲಿ ಫಲಗಳನ್ನು ಕೊಡುತ್ತವೆ. ಈಗ ಅವುಗಳ ಫಲವು ಸಾಮಾನ್ಯವಾಗಿ ತಿಳಿಯುವುದಿಲ್ಲ.

ಆದ್ದರಿಂದ ಆ ಕರ್ಮಗಳು ಅದೃಷ್ಟಫಲಕರ್ಮಗಳೆನಿಸುತ್ತವೆ. ಧರ್ಮಶಾಸ್ತ್ರದಲ್ಲಿ ಹೇಳಿರುವ ಈ ವಿಧವಾದ ಎಲ್ಲಾ ಕರ್ಮಗಳನ್ನು ಸೂರ್ಯಸಿದ್ಧಾಂತ ಪಂಚಾಂಗದಲ್ಲಿರುವ ತಿಥಿ ಮುಂತಾದ ಐದು ಅಂಗಗಳನ್ನು ತಿಳಿದು ಮಾಡಬೇಕು. ಈ ಪಂಚಾಂಗದಲ್ಲಿ ಸೂರ್ಯಸಿದ್ಧಾಂತ ಮತ್ತು ದೃಕ್ ಸಿದ್ಧಾಂತದ ಪಂಚಾಂಗಗಳನ್ನು ಕೊಡಲಾಗಿದೆ. ಸೂರ್ಯದೇವನಿಂದ ಉಪದಿಷ್ಟವಾದ ಸಿದ್ಧಾಂತವು ಸೂರ್ಯಸಿದ್ಧಾಂತವೆನಿಸುತ್ತದೆ.

ಸೂರ್ಯಸಿದ್ಧಾಂತ ಪಂಚಾಂಗದಲ್ಲಿ 10 ಉದ್ದನೆಯ ಸಾಲುಗಳಲ್ಲಿ ಕ್ರಮವಾಗಿ 1) ತಾರೀಖು, 2) ವಾರ (ಸೂರ್ಯೋದಯದಿಂದ ಸೂರ್ಯೋದಯದವರೆಗೆ ಇರುತ್ತದೆ), 3) ತಿಥಿ ಘಟಿ–ಪಳ, 4) ನಕ್ಷತ್ರ ಘಟಿ–ಪಳ, 5) ಯೋಗ ಘಟಿ–ಪಳ, 6) ಕರಣ ಘಟಿ–ಪಳ, 7) ರವಿ ಉದಯ (ಸೂರ್ಯಸಿದ್ಧಾಂತ ಪ್ರಕಾರ) ಗಂಟೆ–ನಿಮಿಷ, 8) ದಿನಮಾನ, 9) ಧರ್ಮಶಾಸ್ತ್ರ ವಿಷಯ, 10) ಶ್ರಾದ್ಧನಿರ್ಣಯಗಳನ್ನು ಕೊಡಲಾಗಿದೆ (ಉಪರಿತಿಥಿ, ನಕ್ಷತ್ರ ಕರಣ ಇವುಗಳಿಗೆ ಮುಗಿಯುವ ಘಟಿ–ಪಳ ಕೊಟ್ಟಿರುತ್ತದೆ). ಈ ಪ್ರಕಾರ ಪ್ರತಿದಿನದ ಆಯಾ ತಿಥಿಗಳಲ್ಲಿ ಮಾಡಬೇಕಾದ ಧರ್ಮಶಾಸ್ತ್ರ, ಶ್ರಾದ್ಧನಿರ್ಣಯದ ವಿಷಯಗಳನ್ನು ನೋಡಿಕೊಂಡು ಅನುಷ್ಠಾನ ಮಾಡಲು ಯೋಗ್ಯವಾಗಿದೆ. ಶ್ರಾದ್ಧಾಭಾವ ಎಂದು ಸೂಚಿಸಿದ ದಿನದಲ್ಲಿ ಶ್ರಾದ್ಧಮಾಡಬಾರದು. ಒಂದೇ ದಿನ 2 ಅಥವಾ 3 ಶ್ರಾದ್ಧ ತಿಥಿಗಳನ್ನು ತೋರಿಸಿದ ದಿನದಂದು ಆ ಶ್ರಾದ್ಧತಿಥಿಗಳ ಶ್ರಾದ್ಧವನ್ನು ಆ ದಿನವೇ ಆಚರಿಸಬೇಕು.

ದೃಕ್ ಸಿದ್ಧಾಂತಪಂಚಾಂಗದಿಂದ ಧರ್ಮಶಾಸ್ತ್ರೋಕ್ತಕರ್ಮಗಳನ್ನು ಮಾಡಕೂಡದು. ಜಾತಕ, ಪ್ರಶ್ನ, ಮುಹೂರ್ತಾದಿಗಳಿಗಾಗಿ ಮಾತ್ರ ದೃಕ್ ಸಿದ್ಧಾಂತ ಪಂಚಾಂಗವನ್ನು ಅನುಸರಿಸಬೇಕು. ದೃಕ್ ಪಂಚಾಂಗದಲ್ಲಿ ಎಲ್ಲವನ್ನೂ ಘಂಟೆ–ನಿಮಿಷಗಳಲ್ಲಿ ಕೊಡಲಾಗಿದೆ. ಪ್ರತಿನಿತ್ಯ ಉದಯ, ಲಗ್ನಭೋಗ್ಯ, ಸೂರ್ಯೋದಯಾಸ್ತ ಕಾಲಗಳನ್ನು ದೃಕ್ ಸಿದ್ಧಾಂತರೀತ್ಯಾ ಪ್ರತಿದಿನಕ್ಕೂ ಹಾಕಲಾಗಿದೆ.

ಪರಿವಿಡಿ

೧. ಪಂಚಾಂಗ ಪೀಠಿಕಾ ೯

೨. ಶ್ರೀ ಶುಭಕೃತ್ ಸಂ॥ ರಾಜಾದಿನಾಯಕರು ೧೦

೩. ಶ್ರೀ ಶುಭಕೃತ್ ಸಂ॥ ರಾಜಾದಿನಾಯಕರ ಫಲಗಳು ೧೧

೪. ಶ್ರೀ ಶುಭಕೃತ್ ಸಂ॥ ಸಂಕ್ರಾಂತಿ ೧೨

೫. ಶ್ರೀ ಶುಭಕೃತ್ ಸಂವತ್ಸರ ಹಬ್ಬಗಳು ೧೪

೬. ಶ್ರೀ ಶುಭಕೃತ್ ಸಂ॥ ಫಲಸಂಗ್ರಹ, ಮಳೆಚಕ್ರ ೧೫

೭. ಶ್ರೀ ಶುಭಕೃತ್ ಸಂ॥ ರಾಶಿಫಲ ೧೬–೧೯

೮. ಶ್ರೀ ಶುಭಕೃತ್ ಸಂ॥ ಮುಹೂರ್ತ ೨೦

೯. ಸೂರ್ಯಚಂದ್ರಗ್ರಹಣ ವಿವರ ೨೧–೨೩

೧೦. ಚೈತ್ರಾದಿ ಪಂಚಾಂಗ ೨೪–೪೭

೧೧. ಷಣ್ಣವತಿ (೯೬) ಶ್ರಾದ್ಧತಿಥಿಗಳು ೪೮

೧೨. ದೈನಂದಿನ ಲಗ್ನಭೋಗ್ಯಕಾಲಗಳು ೪೯

೧೩. ಶ್ರೀ ಶುಭಕೃತ್ ಸಂ॥ ದೃಕ್‌ನಕ್ಷತ್ರಾಂತ್ಯಕಾಲಗಳು ೫೦

೧೪. ಶ್ರೀ ಶುಭಕೃತ್ ಸಂ॥ ದೃಕ್‌ಗ್ರಹಗಳ ನಕ್ಷತ್ರಪಾದಚಾರಗಳು ೫೨

೧೫. ನವರಾತ್ರೋತ್ಸವಸಂಕಲ್ಪ ೫೫

ಪಂಚಾಂಗ ಪೀಠಿಕಾ

ಚೈತ್ರಾದಾವುಷಸಿ ಸ್ಮರನ್ ರಘುಪತಿಂ ಚೋತ್ಥಾಯ ಚಂದ್ರಂ ಸ್ಮರೇತ್
ವೃದ್ಧಾಜ್ಞಾಮನುಗೃಹ್ಯ ನಿಂಬಕದಲಂ ಪ್ರಾಶ್ಯಾಜ್ಯಪಾತ್ರೇ ಸ್ವಕಂ।
ವಕ್ತ್ರಂ ವೀಕ್ಷ್ಯ ಚ ದರ್ಪಣೇ ಸುಮನಸೋ ದೈವಜ್ಞಮಿತ್ರಾನ್ವಿತಃ
ಪಂಚಾಂಗಂ ಶ್ರುಣುಯಾನ್ನೃಪಃ ಪ್ರಮುದಿತಃ ಸಂಭಾವ್ಯ ಮೌಹೂರ್ತಿಕಾನ್
ಅಬ್ದಾದೌ ಮಿತ್ರಸಂಯುಕ್ತೋ ಮಂಗಲಸ್ನಾನಮಾಚರೇತ್
ವಸ್ತ್ರೈರಾಭರಣೈರ್ದೇಹಮಲಂಕೃತ್ಯ ತತಃ ಶುಚಿಃ ॥೧॥

ದೇವದ್ವಿಜಾನ್ ಸಮಭ್ಯರ್ಚ್ಯ ಪ್ರಗೃಹ್ಯ ಬ್ರಾಹ್ಮಣಾಶಿಷಃ।
ಭಕ್ಷಯಿತ್ವಾ ನಿಂಬಪತ್ರಂ ಶೃಣುಯಾದ್ವರ್ಷಜಂ ಫಲಮ್॥ ೨॥

ವತ್ಸರಾದೌ ವಸಂತಾದೌ ಬಲಿರಾಜ್ಯೇ ತಥೈವ ಚ।
ತೈಲಸ್ನಾನಮಕುರ್ವಾಣೋ ನರಕಂ ಪ್ರತಿಪದ್ಯತೇ ॥೩॥

ತೈಲೇ ಲಕ್ಷ್ಮೀರ್ಜಲೇ ಗಂಗಾ ವತ್ಸರಾದಿತಿಥೌ ಶುಭೇ।
ಅಲಕ್ಷ್ಮೀಪರಿಹಾರಾರ್ಥಂ ಮಂಗಲಸ್ನಾನಮಾಚರೇತ್ ॥೪॥

ತೈಲಾಭ್ಯಂಗಸ್ನಾನಮಾದೌ ಚ ಕೃತ್ವಾ
ಪೀಯೋಷೋತ್ಥಂ ಪಾರಿಭದ್ರಸ್ಯ ಪತ್ರಮ್।
ಭಕ್ಷೇತ್ಸೌಖ್ಯಂ ಮಾನದಂ ವ್ಯಾಧಿನಾಶಂ
ದೀರ್ಘಾಯುಷ್ಯಂ ಲಭ್ಯತೇ ವರ್ಷಮೂಲೇ ॥೫॥

ಶತಾಯುರ್ವಜ್ರದೇಹಾಯ ಸರ್ವಸಂಪತ್ಕರಾಯ ಚ।
ಸರ್ವಾರಿಷ್ಟವಿನಾಶಾಯ ನಿಂಬಕಂ ದಲಭಕ್ಷಣಮ್ ॥೬॥

ಪಂಚಾಂಗಶ್ರವಣಫಲಂ

ಯಃ ಶೃಣೋತಿ ಮಧುಶುಕ್ಲಪಕ್ಷಕೇ ವರ್ಷನಾಥ ಸಚಿವಾದಿಕಂ ಫಲಮ್।
ಪ್ರಾಪ್ನುಯಾದ್ದುರಿತಮುಕ್ತವಿಗ್ರಹಂ ಚಾಯುರರ್ಥಮತುಲಂ ಯಶಃ ಸುಖಮ್॥

ಶ್ರುತ್ವಾ ರಾಜಫಲಂ ಭವಂತಿ ಸುಖಿನೋ ಶ್ರುತ್ವಾ ಫಲಂ ಮಂತ್ರಿಣೋ
ಬುಧ್ಯುತ್ಸಾಹಸುಕೀರ್ತಯೋ ಭಟಪತೇಃ ಸಸ್ಯಾಧಿನಾಥಸ್ಯ ಚ।
ಶ್ರುತ್ವಾರ್ಘೇಶಫಲಂ ರಸಾಧಿಪಫಲಂ ಧಾನ್ಯಾಧಿನಾಥಸ್ಯ ಚ
ಶ್ರುತ್ವಾ ನೀರಸನಾಯಕಸ್ಯ ಚ ಫಲಂ ಚೈಶ್ವರ್ಯವಂತಃ ಸದಾ॥

ಆರ್ಯವೃದ್ಧಿಂ ಪುತ್ರಪೌತ್ರಾಭಿವೃದ್ಧಿಂ ನಿತ್ಯಾರೋಗ್ಯಂ ಸಂಪದಂ ಚಾನಪಾಯಂ।
ಅಚ್ಛಿನ್ನಾನಾಮುತ್ಸವಾನಾಮವಾಪ್ತಿಂ ಯಚ್ಛತ್ಯಂತೇ ವತ್ಸರಾಧೀಶಮುಖ್ಯಾಃ॥

ತಿಥೇಶ್ಚ ಶ್ರಿಯಮಾಪ್ನೋತಿ ವಾರಾದಾಯುಷ್ಯವರ್ಧನಮ್।
ನಕ್ಷತ್ರಾದ್ಧರತೇ ಪಾಪಂ ಯೋಗಾದ್ರೋಗನಿವಾರಣಮ್॥ ೧೦॥

ಕರಣಾತ್ಕಾರ್ಯಸಿದ್ಧಿಸ್ಯಾತ್ಪಂಚಾಂಗಫಲಮುತ್ತಮಮ್।
ಇತೀದಂ ವತ್ಸರಫಲಂ ವತ್ಸರಾದಿತಿಥೌ ಶುಭಮ್ ॥೧೧॥

ಯಃ ಶೃಣೋತಿ ನರೋ ಭಕ್ತ್ಯಾ ವತ್ಸರಂ ಸ ಸುಖೀ ಭವೇತ್।
ಸಾಂಗೋಪಾಂಗಂ ವತ್ಸರಸ್ಯ ಬ್ರಹ್ಮಣಃ ಜನ್ಮನಃ ಫಲಂ
ಯೇ ಶೃಣ್ವಂತಿ ಕ್ರತುಫಲಂ ಭಜಂತೇ ನಾತ್ರ ಸಂಶಯಃ॥

ಎಂದು ಇರುವುದರಿಂದ ಮೊದಲು ಬ್ರಹ್ಮನ ದಿನ ಅವನ ಆಯುಃ ಪ್ರಮಾಣಾದಿಗಳನ್ನು ಅನಿಷ್ಟಫಲನಿವೃತ್ತಿ ಇಷ್ಟಫಲಪ್ರಾಪ್ತಿಗಾಗಿ ತಿಳಿಯಬೇಕು. ಸ್ವಸ್ತಿ ಶ್ರೀಸೂರ್ಯಸಿದ್ಧಾಂತ ಮತದಿಂದ ಜಗತ್ತಿನ ಉತ್ಪತ್ತಿಸ್ಥಿತಿಲಯಗಳಿಗೆ ಕಾರಣನಾದ ಶ್ರೀಮಹಾವಿಷ್ಣುವಿನ ನಾಭಿಕಮಲದಿಂದ ಉದಯಿಸಿದ ಚತುರ್ಮುಖಬ್ರಹ್ಮನ ದಿನ ಪ್ರಮಾಣವನ್ನು ಮತ್ತು ಆ ದಿನದ ವಿಶೇಷವನ್ನು ಕೂಡ ತಿಳಿಯಬೇಕು. ಬ್ರಹ್ಮನ ದಿನವೆಂದರೆ **"ಚತುರ್ಯುಗಸಹಸ್ರಾಣಿ ಬ್ರಹ್ಮಣೋ ದಿನಮುಚ್ಯತೇ"** ಎಂದು ಪ್ರಸಿದ್ಧವಾಗಿದೆ. ಕೃತ, ತ್ರೇತಾ, ದ್ವಾಪರ, ಕಲಿಯುಗಗಳು ಒಂದು ಸಾವಿರವಾದರೆ (ಒಂದು ಕಲ್ಪ) ಬ್ರಹ್ಮನ ಒಂದು ಹಗಲು. ಅಂತಹುದೇ ಮತ್ತೊಂದು ಕಲ್ಪವಾದರೆ ಒಂದು ರಾತ್ರಿ. ಹೀಗೆ ಎರಡು ಕಲ್ಪಗಳ ಹಗಲು – ರಾತ್ರಿಗಳಿಂದ ಬ್ರಹ್ಮನ ಒಂದು ದಿನವಾಗುತ್ತದೆ. ಇಂತಹ 360 ದಿನಗಳಿಗೆ 1 ಸಂವತ್ಸರ. ಇಂತಹ ನೂರು ಸಂವತ್ಸರಗಳು ಶ್ರೀಬ್ರಹ್ಮದೇವರ ಆಯುಃ ಪ್ರಮಾಣವು. ಈ 100 ವರ್ಷಗಳಲ್ಲಿ ಈಗ 50 ವರ್ಷಗಳು ಗತಿಸಿವೆ. 2ನೇ ಪರಾರ್ಧವಾದ ಈಗ 51 ನೇ ವರ್ಷದಲ್ಲಿ ಪ್ರಥಮ ಮಾಸ ಪ್ರಥಮ ಪಕ್ಷ ಪ್ರಥಮ ದಿನವಾದ ಶ್ರೀಶ್ವೇತವರಾಹಕಲ್ಪದಲ್ಲಿ ಹಗಲು 13 ಘಳಿಗೆ 42 ಪಳಗಳು ಗತಿಸಿವೆ. ಇಷ್ಟರಲ್ಲಿ ಸ್ವಾಯಂಭುವ, ಸ್ವಾರೋಚಿಷ, ಉತ್ತಮ, ತಾಪಸ, ರೈವತ, ಚಾಕ್ಷುಷವೆಂಬ 6 ಮನ್ವಂತರಗಳು ಕಳೆದುಹೋಗಿ 7ನೆಯದಾದ ವೈವಸ್ವತ ಮನ್ವಂತರದಲ್ಲಿ 27 ಮಹಾಯುಗಗಳು ಮುಗಿದು, 28ನೇ ಮಹಾಯುಗದಲ್ಲಿ ಮೂರು ಪಾದಗಳು ಗತಿಸಿಹೋಗಿವೆ. ಇನ್ನು ಮಹಾಯುಗ–ವೆಂದರೆ 43 ಲಕ್ಷ 20 ಸಾವಿರ ವರ್ಷಗಳು. ಇದರಲ್ಲಿ ಕೃತಯುಗ 17 ಲಕ್ಷ 28 ಸಾವಿರ ವರ್ಷಗಳು ತ್ರೇತಾಯುಗ 12 ಲಕ್ಷ 96 ಸಾವಿರ ವರ್ಷಗಳು ದ್ವಾಪರಯುಗ 8 ಲಕ್ಷ 64 ಸಾವಿರ ವರ್ಷಗಳು ಕಲಿಯುಗ 4 ಲಕ್ಷ 32 ಸಾವಿರ ವರ್ಷಗಳು. 28ನೆಯ ಮಹಾಯುಗದ ಮೂರು ಯುಗಗಳು ಮುಗಿದು ನಾಲ್ಕನೆಯ ಕಲಿಯುಗದಲ್ಲಿ 5123 ವರ್ಷಗಳು ಕಳೆದಿವೆ. ಉಳಿದ ಕಲಿಯುಗ 4 ಲಕ್ಷದ 26 ಸಾವಿರದ 877 ವರ್ಷಗಳು. ಈ ಕಲಿಯುಗದಲ್ಲಿ 6 ಜನ ರಾಜರು ಶಕಕರ್ತರು. ಮೊದಲು ಹಸ್ತಿನಾವತಿಯಲ್ಲಿ ಧರ್ಮರಾಜನ ಶಕ 3044 ವರ್ಷಗಳು ನಂತರ ಉಜ್ಜಯಿನಿಯಲ್ಲಿ ವಿಕ್ರಮರಾಜನ ಶಕೆ 135 ವರ್ಷಗಳು, ಪ್ರತಿಷ್ಠಾನ ನಗರದಲ್ಲಿ ಶಾಲಿವಾಹನ ಶಕ 18,000 ವರ್ಷಗಳು, ನಂತರ ವೈತರಣಿಯ ವಿಜಯಾಭಿನಂದನ ಗತ ಶಕೆ 10,000 ವರ್ಷಗಳು, ನಂತರ ಕಾವೇರಿ ತೀರದಲ್ಲಿ ನಾಗಾರ್ಜುನ ಶಕೆ 4 ಲಕ್ಷ ವರ್ಷಗಳು, ನಂತರ ಗೌಡದೇಶದಲ್ಲಿ ಕಲ್ಕಿಭೂಪತಿ ಶಕೆ 822 ವರ್ಷಗಳು, ಶ್ರೀಶ್ರೀಮಧ್ವಾಚಾರ್ಯರ ಗತ ಶಕೆ 822 ವರ್ಷಗಳು, ಶ್ರೀಶ್ರೀರಾಘವೇಂದ್ರಸ್ವಾಮಿಗಳ ಗತ ಶಕೆ 352 ವರ್ಷಗಳು. ಈಗ ಶ್ರೀಶಾಲಿವಾಹನ ಶಕೆಯಲ್ಲಿ 1944 ವರ್ಷಗಳು ಗತಿಸಿವೆ. ವರ್ತಮಾನ ಶಕೆ 1945. ನರ್ಮದಾ ದಕ್ಷಿಣ ದೇಶದಲ್ಲಿ ಮಂತ್ರಾಲಯದಲ್ಲಿ ಚೈತ್ರಶುಕ್ಲ ಪ್ರತಿಪತ್ತಿನಿಂದ **ಶ್ರೀಶುಭಕೃತ್ ನಾಮ ಸಂವತ್ಸರದ ಆರಂಭವು.**

॥ ಸರ್ವೇ ಜನಾಃ ಸುಖಿನೋ ಭವಂತು ॥

***

ಶ್ರೀ ಶುಭಕೃತ್ ಸಂವತ್ಸರದ
ರಾಜಾದಿ ನವನಾಯಕರು

ರಾಜಾ	ಶನಿ	ಮಂತ್ರಿ	ಗುರು
ಸೇನಾಧಿಪ	ಬುಧ	ಪೂರ್ವಸಸ್ಯಾಧಿಪ	ರವಿ
ಪರಸಸ್ಯಾಧಿಪ	ಗುರು	ಧಾನ್ಯಾಧಿಪ	ಶುಕ್ರ
ರಸಾಧಿಪ	ಮಂಗಳ	ನೀರಸಾಧಿಪ	ರವಿ
ಅರ್ಘಾಧಿಪ	ಬುಧ	ಮೇಘಾಧಿಪ	ಬುಧ

ಉಪನಾಯಕರು

ಪಶ್ವಾಧಿಪ	ರವಿ	ಕೋಶಾಧಿಪ	ರವಿ
ಅಶ್ವಾಧಿಪ	ಶನಿ	ಗಜಾಧಿಪ	ಗುರು
ಯುದ್ಧಾಧಿಪ	ಬುಧ	ವ್ಯಾಪಾರಾಧಿಪ	ಬುಧ
ಛತ್ರಾಧಿಪ	ಶನಿ	ವ್ಯವಹಾರಾಧಿಪ	ಚಂದ್ರ
ದೇವಾಧಿಪ	ಶನಿ	ದ್ರವ್ಯಾಧಿಪ	ಬುಧ
ನರಾಧಿಪ	ರವಿ	ವಸ್ತ್ರಾಧಿಪ	ಚಂದ್ರ
ಸ್ತ್ರೀಣಾಮಧಿಪ	ಗುರು	ರತ್ನಾಧಿಪ	ಬುಧ
ಸರ್ಪಾಧಿಪ	ಬುಧ	ಮಾಂಗಲ್ಯಾಧಿಪ	ಮಂಗಳ
ಮೃಗಾಧಿಪ	ರವಿ	ವೃಕ್ಷಾಧಿಪ	ಶುಕ್ರ
ಪಶುನಾಯಕ	ಬಲರಾಮ	ಸರ್ವೇಷಾಮಧಿಪ	ಶನಿ

ಮೇಷಾದಿ ರಾಶಿಗಳ ಆಯ – ವ್ಯಯ

ರಾಶಿ	ಆಯ	ವ್ಯಯ	ರಾಶಿ	ಆಯ	ವ್ಯಯ
ಮೇಷ	8	5	ವೃಷಭ	2	14
ಮಿಥುನ	8	11	ಕಟಕ	2	8
ಸಿಂಹ	5	5	ಕನ್ಯಾ	8	11
ತುಲಾ	2	14	ವೃಶ್ಚಿಕ	8	5
ಧನುಷ್	5	11	ಮಕರ	14	11
ಕುಂಭ	14	11	ಮೀನ	5	11

ಅಶ್ವಿನ್ಯಾದಿ ನಕ್ಷತ್ರಕಂದಾಯ

ನಕ್ಷತ್ರ	ಪ್ರ	ದ್ವಿ	ತೃ	ನಕ್ಷತ್ರ	ಪ್ರ	ದ್ವಿ	ತೃ
ಅಶ್ವಿ	5	0	4	ಭರ	0	1	2
ಕೃತ್ತಿ	3	2	0	ರೋಹಿ	6	0	3
ಮೃಗ	1	1	1	ಆರ್ದ್ರಾ	4	2	4
ಪುನ	7	0	2	ಪುಷ್ಯ	2	1	0
ಆಶ್ಲೇ	5	2	3	ಮಘ	0	0	1
ಪೂಫ	3	1	4	ಉಫ	6	2	2
ಹಸ್ತಾ	1	0	0	ಚಿತ್ರಾ	4	1	3
ಸ್ವಾತಿ	7	2	1	ವಿಶಾ	2	0	4
ಅನೂ	5	1	2	ಜೇಷ್ಠ	0	2	0
ಮೂಲ	3	0	3	ಪೂಷಾ	6	1	1
ಉಷಾ	1	2	4	ಶ್ರವ	4	0	2
ಧನಿ	7	1	0	ಶತ	2	2	3
ಪೂಭಾ	5	0	1	ಉಭಾ	0	1	4
ರೇವ	3	2	2				

ಫಲ ವಿಚಾರ

ವಿಷಮೇ ತ್ವರ್ಥಲಾಭಸ್ಸ್ಯಾತ್ ಸಮೇ ತು ಸಮತಾ ಭವೇತ್
ಶೂನ್ಯೇ ಶೂನ್ಯಮವಾಪ್ನೋತಿ ಕಂದಾಯಫಲಮೀದೃಶಮ್।
ಆದಿಶೂನ್ಯೇ ಮಹಾವ್ಯಾಧಿಃ ಮಧ್ಯಶೂನ್ಯೇ ಮಹದ್ಭಯಮ್
ಅಂತ್ಯಶೂನ್ಯೇ ರೋಗಪೀಡಾ ತ್ರಿಶೂನ್ಯೇ ಮರಣಂ ಧ್ರುವಮ್ ॥

ಆದಿಯಲ್ಲಿ ಶೂನ್ಯ (0) ಇದ್ದರೆ 4 ತಿಂಗಳಲ್ಲಿ ಮಹಾವ್ಯಾಧಿ, ಮಧ್ಯದಲ್ಲಿ ಶೂನ್ಯ ಇದ್ದರೆ ಸಾಲಾದಿ ಭಯವು, ಅಂತ್ಯದಲ್ಲಿ ಶೂನ್ಯ ಬಂದರೆ ರೋಗಪೀಡೆಯು, ಮೂರೂ ಶೂನ್ಯ ಬಂದರೆ ಮರಣಸಮ ಪೀಡೆಯು. ಸಮಸಂಖ್ಯೆಯು ಸಾಧಾರಣವು, ವಿಷಮ ಸಂಖ್ಯೆಯು ಉತ್ತಮ ಧನದಾಯಕವು.

ಅಥ ವೃಷ್ಟ್ಯಾದಿ ವಿಂಶೋಪಕಗಳು

ವೃಷ್ಟಿ 13, ಧಾನ್ಯ 05, ತೃಣ 05, ಶೀತ 13, ಉಷ್ಣ 17, ವಾತ13, ಪ್ರಜಾವೃದ್ಧಿ 15, ಪ್ರಜಾಕ್ಷಯ 15, ರಾಜವಿಗ್ರಹ 11, ಕ್ಷುಧಾ 07, ತೃಷಾ 13, ನಿದ್ರಾ 05, ಆಲಸ್ಯ 13, ಉದ್ಯೋಗ 11, ಶಾಂತಿ 13, ಕ್ರೋಧ 11, ದಂಡ 03, ಭೇದ 01, ಮೈತ್ರೀ 13, ರಸನಿಷ್ಪತ್ತಿ 07, ಫಲನಿಷ್ಪತ್ತಿ 11, ಉತ್ಸಾಹ 9, ಶಲಭ 17, ಸುಖ 03, ಮೂಷಕ 15, ಅತಿವೃಷ್ಟಿ 19, ಅನಾವೃಷ್ಟಿ 07, ಸ್ವಚಕ್ರ 09, ಪರಚಕ್ರ 15, ಪರಚಕ್ರನಾಶ 03, ರತ್ನ 11, ವಸ್ತ್ರ 09, ಘೃತ 09, ತೈಲ 05, ದುಕೂಲ 05,ಊರ್ಣವಸ್ತ್ರ 17, ಕ್ಷೌಮ 13, ವಲ್ಕಲ 11, ಭೂರ್ಜಪತ್ರ 15, ಸುವರ್ಣ11, ತಾಮ್ರ 17, ವಂಗ 19, ಕಾಂಸ್ಯ 17, ರಜತ 11, ಲೋಹ 19,ತ್ರಪು 9, ಪಿತ್ತಲ 13, ಸೀಸ 17, ಉಗ್ರಪ್ರಕೃತಿ 17, ಸೌಮ್ಯಪ್ರಕೃತಿ 01, ಪಾಪಪ್ರಕೃತಿ 07, ಪುಣ್ಯಪ್ರಕೃತಿ 07, ವ್ಯಾಧಿ 05, ಭೈಷಜ್ಯ 05, ಆಚಾರ11, ಅನಾಚಾರ 09, ಮರಣ 01, ಜನನ 07, ದೇಶೋಪದ್ರವ 13, ದೇಶಶಾಂತಿ 03, ಚೋರಭಯ 13, ಚೋರನಾಶ 11, ಅಗ್ನಿಭಯ 15, ಅಗ್ನಿನಾಶ 09, ವಿಷಭಯ 11, ವಿಷನಾಶ 05, ಸೇವಕತ್ವ 09, ಸ್ವಾಮಿತ್ವ 07, ನಿಜಧನ 17, ಪರಧನ 05, ದ್ಯೂತ 05, ಪುಂಶ್ಚಲೀಕರಣ 01, ಜಾರಣ 11, ಜಾರಣನಾಶ 01, ಮಾರಣ 05, ಮಾರಣನಾಶ 07, ಸ್ತಂಭನ 07, ಸ್ತಂಭನನಾಶ 05, ಮೋಹನ 01, ಮೋಹನನಾಶ 13, ಉಚ್ಚಾಟನ 07, ಉಚ್ಚಾಟನನಾಶ 17, ವಶೀಕರಣ 09,ವಶೀಕರಣನಾಶ 17, ವಾತಪ್ರಕೃತಿ 07, ಪಿತ್ತಪ್ರಕೃತಿ 13, ಕಫಪ್ರಕೃತಿ 01, ದ್ವಂದ್ವಜ 05, ಸನ್ನಿಪಾತ 09, ಯಶ 13, ಅಪಯಶ 17, ಗರ್ವ 03, ಉಗ್ರತಾ 05, ಪ್ರಪಂಚ 07, ಭೂತಬಾಧಾ 09, ಭೂತಬಾಧೋಪಶಮನ 11, ಗ್ರಹದೋಷ 13, ಗ್ರಹ ದೋಷೋಪಶಮನ 15,ಅಂಡಜ 09, ಜರಾಯುಜ 05, ಸ್ವೇದಜ 15, ಉದ್ಭಿಜ 11, ಪುಣ್ಯ 21, ಪಾಪ 21, ಲಾಭ 42, ಸರ್ವನಿಷ್ಪತ್ತಿ 16.

ಗುರು ಶುಕ್ರಾಸ್ತ ವಿಚಾರ

ಶುಕ್ರನು 27–09–2022 ಆಶ್ವೀನ ಶುಕ್ಲ ದ್ವಿತೀಯಾ ರವಿವಾರದಂದು ಪೂರ್ವದಲ್ಲಿ ಅಸ್ತನಾಗಿ 19–11–2022 ಕಾರ್ತಿಕ ಕೃಷ್ಣ ದಶಮೀ ಶನಿವಾರದಂದು ಪಶ್ಚಿಮದಲ್ಲಿ ಉದಯಿಸುವನು.

***

ಶ್ರೀ ಶುಭಕೃತ್ ನಾಮ ಸಂವತ್ಸರ – ನವನಾಯಕರ ಫಲ

ಶ್ರೀಶುಭಕೃತ್ ನಾಮ ಸಂವತ್ಸರಫಲಂ

ಸುವರ್ಣರತ್ನಧಾನ್ಯಾನಿ ಜಗತ್ಸರ್ವಂ ಚರಾಚರಮ್ ।
ಬ್ರಾಹ್ಮಣಾಶ್ಚೈವ ಸಂತುಷ್ಟಾಃ ಶುಭಕೃದ್ವತ್ಸರೇ ಪ್ರಿಯೇ ॥

ಶುಭಕೃತ್ ನಾಮ ಸಂವತ್ಸರದಲ್ಲಿ ಜಗತ್ತಿನಲ್ಲಿರುವ ಸಕಲ ಚರಾಚರ ಪ್ರಾಣಿಗಳೂ, ಸುವರ್ಣ, ರತ್ನ ಮತ್ತು ಧಾನ್ಯಗಳು ಸಮೃದ್ಧಿಯಾಗುವವು. ಬ್ರಾಹ್ಮಣರು ಸಂತುಷ್ಟರಾಗಿರುವರು.

ರಾಜಾ ಶನಿಫಲಂ

ಶನೈಶ್ಚರೋ ರಾಜ್ಯಕೃತೇ ಸಕೃಜ್ಜಲಂ ಪ್ರಭೂತರೋಗೈಃ ಪರಿಪೀಡ್ಯತೇ ಜನಾಃ ।
ಕೃಷ್ಣಾನಿ ಧಾನ್ಯಾನಿ ಫಲಂತಿ ಭೂಮೌ ಚಂಡಾಲಮುಖ್ಯಾ ಸುಖಿನೋ ಭವಂತಿ ॥

ಶನಿಯು ರಾಜನಾಗಿರುವುದರಿಂದ ದೇಶದ ಅಲ್ಲಲ್ಲಿ ಮಾತ್ರ ಮಳೆಯು ಬೀಳುವುದು.ಇದರಿಂದ ತೀವ್ರವಾದ ರೋಗಗಳಿಂದ ಜನರು ಪೀಡಿಸಲ್ಪಡುವರು. ಭೂಮಿಯಲ್ಲಿ ಕಪ್ಪುಧಾನ್ಯಗಳು ಚೆನ್ನಾಗಿ ಬೆಳೆದರೆ, ಚಂಡಾಲರೇ ಮೊದಲಾದ ಜನರು ಸುಖವನ್ನು ಅನುಭವಿಸುವರು.

ಮಂತ್ರಿ ಗುರುಫಲಂ

ಪ್ರಚುರಂ ವರ್ಷತಿ ಮೇಘೋ ಸುಖಿನಃ ಪಾರ್ಥಿವಾ ಪ್ರಜಾಃ ।
ಬಹುಕ್ಷೀರಪ್ರದಾ ಗಾವೋ ಯತ್ರ ಮಂತ್ರೀ ಗುರುರ್ಭವೇತ್ ॥

ಮಂತ್ರಿಯು ಗುರುವಾಗಿರುವುದರಿಂದ ಮೇಘಗಳು ಉತ್ತಮವಾಗಿ ಮಳೆಯನ್ನು ಸುರಿಸುವವು. ಇದರಿಂದ ಭೂಮಿಯಲ್ಲಿರುವ ಜನರು ಸುಖಿಗಳಾಗುವರು. ಹಸುಗಳು ಚೆನ್ನಾಗಿ ಹಾಲನ್ನು ಕೊಡುವವು.

ಸೇನಾಧಿಪ ಬುಧಫಲಂ

ವಾತಾಹತಾ ವಾರಿಧರಾ ಕದಾಚಿದ್ವರ್ಷಂತಿ ಸಸ್ಯಾನಿ ಫಲಾನ್ವಿತಾನಿ ।
ಲೋಕಾಃ ಸದಾ ಪೀಡಿತಕಾಮಚಾರೈಃ ಸೇನಾಧಿಪತ್ಯೇ ಖಲು ಚಂದ್ರಪುತ್ರೇ ॥

ಸೇನಾಧಿಪತಿಯು ಬುಧನಾಗಿರುವುದರಿಂದ ಗಾಳಿಯಿಂದ ಹೊಡೆಯಲ್ಪಟ್ಟ ಮೋಡಗಳು ಕೆಲವೊಮ್ಮೆ ಮಳೆಯನ್ನು ಸುರಿಸಿದರೆ, ಕೆಲವೊಮ್ಮೆ ಗಾಳಿಯಿಂದ ಚದುರಿ ಹೋಗುವವು. ಇದರಿಂದ ಸಸ್ಯಗಳು ಫಲಗಳಿಂದ ಸಮೃದ್ಧವಾಗುವವು. ಪ್ರಜೆಗಳು ಕಾಮನಬಾಧೆಗೊಳಗಾಗುವರು.

ಪೂರ್ವಸಸ್ಯಾಧಿಪ ರವಿಫಲಂ

ಕ್ವಚಿತ್ಪಚ್ಯಂತಿ ಧಾನ್ಯಾನಿ ಕ್ವಚಿತ್ಪಚ್ಯೇನ್ನ ಭೂತಲೇ ।
ವ್ಯಾಧಿಯುದ್ಧಭಯಂ ಘೋರಂ ಸಸ್ಯಾನಾಮಧಿಪೇ ರವೌ ॥

ಮುಂಗಾರು ಬೆಳೆಗೆ ಅಧಿಪತಿಯು ರವಿಯಾಗಿರುವುದರಿಂದ ಭೂಮಿಯ ಕೆಲವೊಂದು ಪ್ರದೇಶ ಗಳಲ್ಲಿ ಬೆಳೆಯು ಉತ್ತಮವಾಗಿ ಬೆಳೆದರೆ, ಕೆಲವೊಂದು ಪ್ರದೇಶಗಳಲ್ಲಿ ಬೆಳೆಯು ಸರಿಯಾಗಿ ಬೆಳೆಯಲಾರದು. ದೇಶದೆಲ್ಲೆಡೆ ಘೋರವಾದ ವ್ಯಾಧಿ ಮತ್ತು ಯುದ್ಧದ ಭಯವು ತಲೆದೋರುವುದು.

ಪರಸಸ್ಯಾಧಿಪ ಗುರುಫಲಂ

ಆನಂದಃ ಸರ್ವಲೋಕಾನಾಂ ಸುವೃಷ್ಟಿಶ್ಚ ಪ್ರಜಾಯತೇ
ನಿಷ್ಪತ್ತಿಃ ಸರ್ವಸಸ್ಯಾನಾಂ ಯತ್ರ ಸಸ್ಯಾಧಿಪೇ ಗುರೌ ॥

ಹಿಂಗಾರು ಬೆಳೆಗೆ ಅಧಿಪತಿಯು ಗುರುವಾಗಿರುವುದರಿಂದ ದೇಶದೆಲ್ಲೆಡೆ ಉತ್ತಮವಾಗಿಮಳೆಯಾಗಿ, ಎಲ್ಲ ರೀತಿಯ ಬೆಳೆಗಳು ಉತ್ತಮ ಫಸಲನ್ನು ನೀಡುವುದರಿಂದ ಸಮಸ್ತಜೀವಿಗಳು ಆನಂದವನ್ನು ಹೊಂದುವರು.

ಧಾನ್ಯಾಧಿಪ ಶುಕ್ರಫಲಂ

ಶುಕ್ರೇ ಧಾನ್ಯಾಧಿಪೇ ಯತ್ರ ಸುಭಿಕ್ಷಂ ತತ್ರ ಜಾಯತೇ ।
ಶ್ವೇತಧಾನ್ಯಂ ಸುಫಲಿತಂ ಸುಭಿಕ್ಷಂ ಸ್ಯಾಚ್ಚ ಭೂತಲೇ ॥

ಧಾನ್ಯಾಧಿಪತಿಯು ಶುಕ್ರನಾಗಿರುವುದರಿಂದ ದೇಶದೆಲ್ಲೆಡೆ ಬಿಳಿ ಬಣ್ಣದ ಧಾನ್ಯಗಳು ಚೆನ್ನಾಗಿ ಬೆಳೆದು ಸುಭಿಕ್ಷೆಯಾಗುವುದು.

ರಸಾಧಿಪ ಮಂಗಳಫಲಂ

ರಸೇಶೋ ಭೂಮಿ ಪುತ್ರಶ್ಚೇತ್ ಸ್ವಲ್ಪತೋಯಾ ವಸುಂಧರಾ ।
ವಿಕ್ರಯಂ ಸರ್ವವಸ್ತೂನಾಂ ಕರ್ತವ್ಯೋ ಧಾನ್ಯಸಂಗ್ರಹಃ ॥

ರಸಾಧಿಪತಿಯು ಮಂಗಳನಾಗಿರುವುದರಿಂದ ಭೂಮಿಯಲ್ಲಿ ಸ್ವಲ್ಪ ಮಳೆಯುಬೀಳುವುದು. ಇದರಿಂದ ಎಲ್ಲಾ ವಿಧವಾದ ವಸ್ತುಗಳು ತೇಜಿಯಿಂದ ಮಾರಲ್ಪಡುವವು.ಆದುದರಿಂದ ಧಾನ್ಯಗಳ ಸಂಗ್ರಹ ಮಾಡುವುದು ಉತ್ತಮ.

ನೀರಸಾಧಿಪ ರವಿಫಲಂ

ನೀರಸಾಧಿಪತೌ ಸೂರ್ಯೇ ತಾಮ್ರಚಂದನಯೋರಪಿ ।
ರತ್ನಮಾಣಿಕ್ಯಮುಕ್ತಾನಾಂ ಜಾಯತೇ ವೃದ್ಧಿರುತ್ತಮಾ ॥

ನೀರಸಾಧಿಪತಿಯು ರವಿಯಾಗಿರುವುದರಿಂದ ತಾಮ್ರ, ಚಂದನ, ರತ್ನ, ಮಾಣಿಕ್ಯಾದಿಗಳು ತೇಜಿಯಾಗುವವು.

ಅರ್ಘಾಧಿಪ ಬುಧಫಲಂ

ಅರ್ಘಾಧಿನಾಥೇ ಯದಿ ಚಂದ್ರಪುತ್ರೇ ವೃಷ್ಟ್ಯರ್ಘಧಾನ್ಯಾನಿ ಬಹೂನಿ ಚ ಸ್ಯುಃ ।
ಕುಮಾರಪಾಷಂಡಜಡೇಂದ್ರಜಾಲಿನಿ ಪ್ರಭೂತಹಾಸ್ಯಾದಿರತಾ ಪರೇ ಜನಾಃ ॥

ಅರ್ಘಾಧಿಪತಿಯು ಬುಧನಾಗಿರುವುದರಿಂದ ಉತ್ತಮವಾದ ಮಳೆಯು ಬೀಳುವುದು.ಧಾನ್ಯಗಳು ಚೆನ್ನಾಗಿ ಬೆಳೆದು, ತೇಜಿಯಿಂದ ಮಾರಲ್ಪಡುವವು. ಕುಮಾರರು, ಪಾಷಂಡಿಕಾರ್ಯಗಳಲ್ಲಿ ನಿರತರೂ, ಜಡರೂ, ಇಂದ್ರಜಾಲದಲ್ಲಿ ಆಸಕ್ತರೂ,ಹಾಸ್ಯಾದಿಗಳಲ್ಲಿ ಜನರು ರತರಾಗುವರು.

ಮೇಘಾಧಿಪ ಬುಧಫಲಂ

ಭವಂತಿ ಬಹವೋ ಮೇಘಾ ಜಲಪೂರ್ಣಾ ವಸುಂಧರಾ ।
ಬಹುಧಾನ್ಯಾನಿ ಜಾಯಂತೇ ಮೇಘಾನಾಮಧಿಪೇ ಬುಧೇ ॥

ಮೇಘಾಧಿಪತಿಯು ಬುಧನಾಗಿರುವುದರಿಂದ ಭೂಮಿಯು ಜಲದಿಂದ ಪೂರ್ಣವಾಗುವುದು. ಎಲ್ಲಾ ರೀತಿಯ ಧಾನ್ಯಗಳು ಉತ್ತಮ ಫಸಲನ್ನು ಕೊಡುವವು.

ಪಶುಪಾಲಕ ಬಲರಾಮ ಫಲಂ

ಸುವೃಷ್ಟಿಃ ಸರ್ವದೇಶಾನಾಂ ಸರ್ವಸಸ್ಯಸಮೃದ್ಧಯಮ್ ।
ಮಧ್ಯದೇಶೇ ಸುಭಿಕ್ಷಂ ಚ ರಾಮಾಶ್ಚೇತ್ಪಶುನಾಯಕೇ ॥

ಬಲರಾಮನು ಪಶುಪಾಲಕನಾಗಿರುವದರಿಂದ ಇಡೀ ದೇಶದಲ್ಲಿ ಎಲ್ಲೆಡೆ ಸುವೃಷ್ಟಿಯುಂಟಾಗುವುದು. ಇದರಿಂದ ಎಲ್ಲಾ ರೀತಿಯ ಸಸ್ಯಗಳು ಸಮೃದ್ಧವಾಗಿ ಬೆಳೆದು ಫಸಲನ್ನುಕೊಡುವವು. ಜನ ಹಾಗೂ ಪಶುಗಳು ಸುಖವನ್ನನುಭವಿಸುವರು. ವಿಶೇಷವಾಗಿ ಮಧ್ಯದೇಶದಲ್ಲಿ ಸುಭಿಕ್ಷೆಯುಂಟಾಗುವುದು.

ಆವರ್ತ ನಾಮಕ ಮೇಘ ಫಲಂ

ಮಹಾಭಯಂ ಮಹಾವಾಯು ಸೇಂದ್ರಚಾಪ ಸಗರ್ಜಿತಮ್ ।

ವೃದ್ಧಿಃ ಸ್ಯಾತ್ಪೂರ್ವಸಸ್ಯಾನಾಮಾವರ್ತೋ ಮೇಘಲಕ್ಷಣಮ್ ॥

ಈ ವರ್ಷ ಆವರ್ತ ನಾಮಕ ಮೇಘವು ಮೇರುಶಿಖರದಲ್ಲಿ ಉತ್ಪತ್ತಿಯಾಗಿ ಬಹಳಗಾಳಿಯಿಂದ ಕೂಡಿದ್ದು, ಮಿಂಚು–ಗುಡುಗುಗಳಿಂದ ಕೂಡಿದ ಮಳೆಯನ್ನು ಸುರಿಸಿ ಮಹಾಭಯವನ್ನುಂಟು ಮಾಡುವುದು. ಮುಂಗಾರು ಮಳೆಯು ಉತ್ತಮವಾಗಿ ಬಿದ್ದು ಬೆಳೆಯು ಉತ್ತಮ ಫಸಲನ್ನು ನೀಡುವುದು.

ಕುಂಭಗತ ಗುರುಚಾರಫಲಂ

ಹೃದಯಾನಂದಿನೀ ಧಾತ್ರೀ ಫಲಿತಾ ಚ ಸುವೃಷ್ಟಿಭಿಃ ।

ಅಜಾತಶತ್ರವಃ ಸರ್ವೇ ಕುಂಭಗೇ ದೇವಪೂಜಿತೇ ॥

ಗುರುವು ಕುಂಭರಾಶಿಯಲ್ಲಿ ಸಂಚರಿಸುವಾಗ ಭೂಮಿಯು ಸುವೃಷ್ಟಿಯಿಂದ ಫಲಭರಿತವಾಗಿ, ಸರ್ವರಿಗೂ ಹೃದಯಾನಂದದಾಯಕವಾಗುವುದು. ಜನರೆಲ್ಲರೂ ಪರಸ್ಪರ ಮೈತ್ರಿಯಿಂದ ಕೂಡಿದವರಾಗಿರುತ್ತಾರೆ.

ಮೀನಗತ ಗುರುಚಾರ ಫಲಂ

ನಾನಾವನೋದ್ಯಾನತಟಾಕಸಸ್ಯ ಮಹೋತ್ಸವಾನೇಕಮಖಕ್ರಿಯಾದ್ಯಾಃ ॥

ಮೀನಸ್ಥಿತೇ ದೇವಗುರೌ ಧರಿತ್ರೀ ರಮ್ಯಾಃ ಕ್ಷಿತೀಶಾ ಸುಖಿನಃ ಪರೇ ತೇ ॥

ಗುರುವು ಮೀನರಾಶಿಯಲ್ಲಿ ಸಂಚರಿಸುವಾಗ ಭೂಮಿಯು ನಾನಾವಿಧವಾದಉದ್ಯಾನವನಗಳಿಂದ, ಸರೋವರಗಳಿಂದ, ಮಹೋತ್ಸವಗಳಿಂದ, ಅನೇಕವಿಧವಾದಯಜ್ಞ–ಯಾಗಾದಿಗಳಿಂದ ಮನೋಹರವಾಗಿ ಗೋಚರಿಸುವುದು. ರಾಜರುಗಳು ಸುಖವನ್ನನುಭವಿಸುವರು.

ಮಕರಗತ ಶನಿಚಾರ ಫಲಂ

ನಕ್ರಸ್ಥಿತೇ ಭಾನುಸುತೇ ಚ ಭೀತಿಃ ಸ್ಯಾದರ್ಘವೃದ್ಧಿರ್ಮಹತೀ ಚ ವೃಷ್ಟಿಃ ।

ದಶಾರ್ಣದೇಶಾ ಯವನಾಶ್ಚ ನಷ್ಟಾಃ ಪುರೋಹಿತಾವಿಪ್ರಭಿಷಜ್ ನೃಪಾಲಾಃ ॥

ಶನಿಯು ಮಕರರಾಶಿಯಲ್ಲಿರುವಾಗ ಸಮಸ್ತ ಜನರಿಗೆ ನಾನಾವಿಧವಾದ ಭೀತಿಯುಂಟಾಗುವುದು. ಸಮಸ್ತ ವಸ್ತುಗಳ ಬೆಲೆ ಯೇರಿಕೆಯಾಗುವುದು. ಅತಿಯಾದ ಮಳೆಬೀಳುವುದು. ಕೋಸಲದೇಶದಲ್ಲಿರುವ ಜನರ, ಯವನರ ಹಾಗೂ ಪುರೋಹಿತರಾದ ಬ್ರಾಹ್ಮಣ, ವೈದ್ಯ ಮತ್ತು ರಾಜರುಗಳಿಗೆ ಪ್ರಾಣಭೀತಿಯುಂಟಾಗುವುದು.

ಆರ್ದ್ರಾಪ್ರವೇಶಫಲಂ

ಈ ವರ್ಷ ಆರ್ದ್ರಾ ನಕ್ಷತ್ರವು 22–06–2022 ಬುಧವಾರ ಜ್ಯೇಷ್ಠ ಕೃಷ್ಣನವಮಿ ರೇವತಿ ನಕ್ಷತ್ರದಲ್ಲಿ ರಾತ್ರಿ 8.06 ನಿ.ಕ್ಕೆ (35 ಘ 31 ಫ) ಪ್ರವೇಶವಾಗಿರುವುದರಿಂದ ದೇಶದೆಲ್ಲೆಡೆ ಮಳೆ ಸಮೃದ್ಧಿಯಾಗಿ ಬೆಳೆಗಳು ಉತ್ತಮಫಲವನ್ನು ಕೊಡುವವು.

ನವಮಿ ಫಲ – ರಕ್ತ ಸಂಬಂಧಿ ಏಳು ವಿಧವಾದ ಉಪದ್ರವಗಳಿಂದ ಭಯವುಂಟಾಗುತ್ತದೆ.

ಬುಧವಾರ ಫಲಂ – ಬ್ರಾಹ್ಮಣರಿಗೆ ಕಲ್ಯಾಣವಾಗುವುದು.

ರೇವತಿ ನಕ್ಷತ್ರಫಲಂ – ಧಾನ್ಯಗಳು ವಿಫುಲವಾಗಿ ಬೆಳೆಯುವವು.

ಶೋಭನ ಯೋಗ ಫಲ– ಸಮಸ್ತ ಜೀವಿಗಳೂ, ರಾಜರುಗಳೂ ಉತ್ತಮ ಕೆಲಸಗಳನ್ನು ಮಾಡುವರು.

ರಾತ್ರಿ ಪ್ರವೇಶ ಫಲ– ದೇಶದೆಲ್ಲೆಡೆ ಉತ್ತಮ ಮಳೆಯಾಗುವುದರಿಂದ ಸರ್ವಸಸ್ಯಗಳು ಉತ್ತಮ ಬೆಳೆಯನ್ನು ನೀಡುವವು. ಗೋವುಗಳಿಗೆ ಸುಖವಾದರೆ, ದೇಶದ ನಾಯಕರುಗಳು ಯುದ್ಧದಲ್ಲಿ ನಿರಾಸಕ್ತಿಯನ್ನು ಹೊಂದುವರು.

ವೃಷ್ಟಿ ಪ್ರಮಾಣ 3 ಆಢಕ ವೃಷ್ಟಿಯಾಗುತ್ತದೆ.

ದಶಭಾಗಾಃ ಸಮುದ್ರೇಷು ಷಡ್ಭಾಗಾಃ ಪರ್ವತೇಷು ಚ ।

ಚತ್ವಾರೋ ಭುವಿ ಪರ್ಜನ್ಯೋ ಹ್ಯೇವಂ ವರ್ಷತಿ ಚ ತ್ರಿಧಾ ॥

ಕರ್ಕ ಸಂಕ್ರಮಣ

ಶ್ರೀಶುಭಕೃತ್ ನಾಮ ಸಂವತ್ಸರ ಆಷಾಢ ಕೃಷ್ಣ ಚತುರ್ಥಿ ಭಾನುವಾರ ತಾ. 17–07–2022 ರಂದು ಬೆಳಿಗ್ಗೆ 10.58 ನಿ. ಕ್ಕೆ (12 ಘಟಿ 44 ಪಳ) ಸೂರ್ಯನು ಕರ್ಕರಾಶಿಯನ್ನುಪ್ರವೇಶಿಸುತ್ತಾನೆ.

ವಿಂಶತಿ (ತ್ರಿಂಶತಿ ವಾ) ಕರ್ಕಟಗೇ ಪೂರ್ವೇ .... ಎನ್ನುವ ಪ್ರಮಾಣದಂತೆ ಕರ್ಕಾಟಕಸಂಕ್ರಮಣದಲ್ಲಿ ಸಂಕ್ರಮಣಕ್ಕಿಂತ ಪೂರ್ವದಲ್ಲಿ 30 ಘಳಿಗೆ ಸಂಕ್ರಮಣ ಪುಣ್ಯಕಾಲ ಎಂದಿರುವುದು.ಸೂರ್ಯನು ಕರ್ಕರಾಶಿಯನ್ನು 17–07–2022 ರಂದು ಬೆಳಿಗ್ಗೆ 10–58 ನಿ.ಕ್ಕೆ ಪ್ರವೇಶಮಾಡುತ್ತಿರುವುದರಿಂದ 17–07–2022 ರಂದು ಸೂರ್ಯೋದಯದಿಂದ 10–58 ನಿ.ದವರೆಗೆ ಕರ್ಕಸಂಕ್ರಮಣದ ನಿಮಿತ್ತ ದಕ್ಷಿಣಾಯನ ಪರ್ವಪುಣ್ಯಕಾಲವಿರುವುದು. ಆ ಪ್ರಯುಕ್ತ ಸ್ನಾನ, ತರ್ಪಣ, ದಾನಾದಿಗಳನ್ನು ಮಾಡಬೇಕು.

ಮಕರ ಸಂಕ್ರಮಣ

ಶ್ರೀಶುಭಕೃತ್ ನಾಮ ಸಂವತ್ಸರ ಪುಷ್ಯ ಕೃಷ್ಣ ಅಷ್ಟಮೀ ಶನಿವಾರ ತಾ. 14.01.2023ರಂದು ರಾತ್ರಿ 26.18 ನಿ. ಕ್ಕೆ (48ಘಟಿ 42ಪಳ) ಚಿತ್ತಾ ನಕ್ಷತ್ರದಲ್ಲಿ ಸೂರ್ಯನು ಮಕರರಾಶಿಯನ್ನು ಪ್ರವೇಶಿಸುತ್ತಾನೆ. ಆದುದರಿಂದ ತಾ. 14.01.2023 ಶನಿವಾರದಂದು ಭೋಗಿಹಬ್ಬ.

ಸಂಕ್ರಮಣ ಪುಣ್ಯಕಾಲ: ಶ್ರೀಶುಭಕೃತ್ ನಾಮ ಸಂವತ್ಸರ ಪುಷ್ಯ ಕೃಷ್ಣ ಅಷ್ಟಮೀ ಶನಿವಾರತಾ. 14–1–2023 ರಂದು ರಾತ್ರಿ 26.18 ನಿ.ಕ್ಕೆ ಸೂರ್ಯನು ಮಕರರಾಶಿಯನ್ನುಪ್ರವೇಶಿಸುತ್ತಿರುವುದರಿಂದ ತಾ. 15–1–2023 ಭಾನುವಾರದಂದು ಬೆಳಿಗ್ಗೆ ಸೂರ್ಯೋದಯದಿಂದ 2.18 ನಿ॥ ದ ವರೆಗೆ ಉತ್ತರಾಯಣ ಪರ್ವಪುಣ್ಯ ಕಾಲವಿರುವುದು. ಆದಕಾರಣಉತ್ತರಾಯಣ ಪರ್ವಕಾಲ ಪ್ರಯುಕ್ತ ಸ್ನಾನದಾನಾದಿ ಷಟ್‌ತಿಲ ಕರ್ಮ ಗಳನ್ನುಆಚರಿಸಬೇಕು. ಷಟ್ತಿಲಕರ್ಮಗಳಾದ ತಿಲಸ್ನಾನ, ತಿಲದೀಪ ಹಚ್ಚುವುದು (ಉದ್ವರ್ತಿಎಂದರೆ ಆರತಿ ಬತ್ತಿ), ತಿಲಹೋಮ, ತಿಲತರ್ಪಣ, ತಿಲಭಕ್ಷಣ, ತಿಲದಾನಗಳನ್ನುಮಾಡಬೇಕು.

ವೃಂದಾವನಗಳಿಗೆ ಜಲಾಭಿಷೇಕ, ಪಂಚಾಮೃತ, ದೇವಪೂಜೆ, ನೈವೇದ್ಯ, ವೈಶ್ವದೇವ, ಹಸ್ತೋದಕಾದಿಗಳನ್ನು ಪ್ರತಿನಿತ್ಯದಂತೆ ಮಾಡಬೇಕು.

ಮಕರ ಸಂಕ್ರಮಣ ಸ್ವರೂಪ

ಸಂಜ್ಞಾ – ಘೋರಾ, ದಿಶಾಮುಖ – ಪೂರ್ವ, ದಿಶಾಗಮನ – ದಕ್ಷಿಣ, ದಿಶಾದೃಷ್ಟಿ– ನೈರುತ್ಯ, ವಾಹನ – ವರಾಹ, ಉಪವಾಹನ – ವೃಷಭ, ತತ್ ಫಲ – ಪೀಡಾ, ವಸ್ತ್ರ– ಹಸಿರು, ಸ್ಥಿತಿ – ತಿಷ್ಯನ್, ಭೂಷಣ – ರಜತ, ಆಯುಧ – ಖಡ್ಗ, ಪಾತ್ರ – ತಾಮ್ರ,ಭಕ್ಷಣ – ಭಿಕ್ಷೆ, ಲೇಪನ – ಚಂದನ, ಜಾತಿ – ಸರ್ಪ, ಪುಷ್ಪ – ಬಕುಲ, ಫಲ – ಆಮ್ರ,ಆಭರಣ – ಮುತ್ತು, ಕಂಚುಕ – ಶುಕವರ್ಣ, ಅವಸ್ಥೆ – ಕನ್ಯಾ, ಸ್ನಾನ–ಸ್ನಾನೋದಕ– ಅಗರು, ಛತ್ರ – ಹಳದಿ.

ಸಂಕ್ರಮಣ ನಾಮಾದಿಗಳು – ವಾರನಾಮ – ಘೋರಾ ನಾಮಕ ಸಂಕ್ರಮಣವಾಗಿರುವುದರಿಂದಶೂದ್ರರಿಗೆ ಸುಖವುಂಟಾಗುವುದು. ಇತರರಿಗೆ ಪೀಡೆಯುಂಟಾಗುವುದು. ಸಮಸ್ತರೀತಿಯ ಧಾನ್ಯಗಳಬಾಹುಳ್ಯದಿಂದ ಸುಖ ಸಮೃದ್ಧಿಯಾಗುವುದು.

ದಕ್ಷಿಣ ಗಮನ ಫಲ– ಮಾಲವ, ದರ್ದುರ, ಪಾಂಡ್ಯ ದೇಶದ ನಾಯಕರುಗಳಿಗೆ ಉತ್ತರದೇಶದ ರಾಜರು ಗಳಿಂದ ಆಕ್ರಮಣಭೀತಿ, ಧನ, ಧಾನ್ಯಗಳ ಅಪಹರಣ ಭಯ.

ನೈರುತ್ಯ ದೃಷ್ಟಿ ಫಲ – ಕೊಂಕಣದೇಶದಲ್ಲಿರುವ ಜನರು ರಾಜರುಗಳಿಂದ ಪೀಡಿತರಾಗಿ ದುಃಖಿತ ರಾಗುವರು.

ರಾತ್ರಿ ಚತುರ್ಥಯಾಮದ ಫಲ – ಎಮ್ಮೆ, ವೃಷಭ, ಗೋ, ಕುರಿಗಳನ್ನು ರಕ್ಷಿಸುವವರ ಮರಣ.

ವಾಹನ ವರಾಹ – ಈ ಬಾರಿ ಸಂಕ್ರಮಣವು ವರಾಹದ ಮೇಲೆ ಬಂದಿದೆ. ಅನೇಕ ರಾಜರುಗಳು ಬಾಣಗಳ ಸಮೂಹದಿಂದ ಹೊಡೆಯಲ್ಪಟ್ಟವರಾಗಿಮರಣ ಹೊಂದುವರು. ಹಳ್ಳಿಗಳಲ್ಲಿ ವಾಸ ಮಾಡುವವರು ಹಾಗೂ ಮಡಿಕೆಗಳನ್ನು ಮಾರುವವರುರಾಜರುಗಳಿಂದ ಪೀಡೆಯನ್ನನುಭವಿಸುವರು.

ಉಪವಾಹನ ವೃಷಭ – ದಕ್ಷಿಣ ದೇಶದಲ್ಲಿ ಸುಭಿಕ್ಷೆಯಾದರೆ, ಉತ್ತರ ದೇಶದಲ್ಲಿ ರಾಜರುಗಳು ಮರಣ ಹೊಂದುವರು. ಭೂಮಿಯು ಬೆಂಕಿ ಮತ್ತು ಕಳ್ಳರಿಂದ ತೊಂದರೆ ಪಡುವುದು.

ಸಂಕ್ರಮಣಫಲ– ಯಾವ ಯಾವ ವಸ್ತುಗಳನ್ನು ಸ್ವೀಕರಿಸುವನೋ ಆ ವಸ್ತುಗಳುತುಟ್ಟಿಯಾಗುವವು, ಇಲ್ಲವೇ ನಾಶಹೊಂದುವವು. ಇದರಿಂದ ವರ್ತಕರಿಗೆ ಭೀತಿಯುಂಟಾಗುವುದು. ಸಂಕ್ರಮಣನು ಯಾವ ದಿಕ್ಕಿನಿಂದ ಬಂದಿರುವನೋ ಆದಿಕ್ಕಿನ ದೇಶಗಳಿಗೆ ಸೌಖ್ಯವು. ಸಂಕ್ರಮಣನು ಯಾವ ದಿಕ್ಕಿಗೆ ಗಮನ ಮಾಡುತ್ತಿರುವನೋಆ ದಿಕ್ಕಿನ ದೇಶಗಳಿಗೆ ದುಃಖವು. ಸಂಕ್ರಮಣನ ದೃಷ್ಟಿ ಯಾವ ದಿಕ್ಕಿನ ಕಡೆಗೋ ಆದಿಕ್ಕಿನ ದೇಶಗಳಿಗೆ ವಿವಿಧ ರೀತಿಯ ಹಾನಿಯುಂಟಾಗುವುವು.

ಜನ್ಮನಕ್ಷತ್ರಾನುಸಾರ ಸಂಕ್ರಮಣ ಫಲಂ

ಯಾತ್ರ	ಸುಖ	ಪೀಡಾ	ವಸ್ತುಲಾಭ	ಅರ್ಥಹಾನಿ	ಧನಲಾಭ
೩	೬	೩	೬	೩	೬
ಚಿತ್ರಾ	ಅನು, ಜ್ಯೇಷ್ಠ	ಧನಿ	ಉ.ಭ.ರೇ	ಮೃಗ	ಪುಷ್ಯ.ಆಶ್ಲೇ
ಸ್ವಾತಿ	ಮೂಲ, ಪೂಷಾ	ಶತ	ಅಶ್ವಿ, ಭರ	ಆರ್ದ್ರಾ	ಮಘ, ಪೂಫ
ವಿಶಾ	ಉಷಾ, ಶ್ರವ	ಪೂಭಾ	ಕೃತ್ತಿ, ರೋಹಿ	ಪುನ	ಉಫ, ಹಸ್ತಾ

ಆಯಾ ನಕ್ಷತ್ರದವರಿಗೆ ಕೋಷ್ಟಕದಲ್ಲಿ ತಿಳಿಸಿದಂತೆ ಈ ವರ್ಷ ಮಕರ ಸಂಕ್ರಾಂತಿ ಫಲವು ದೊರೆಯುವುದು.

***

ಸಂಕ್ರಮಣಗಳು				ಪರ್ವಪುಣ್ಯಕಾಲ	
ದಿನಾಂಕ	ಸಂಕ್ರಮಣ	ಘಂ.ನಿ.	ವಾರ	ದಿನಾಂಕ	ಪುಣ್ಯಕಾಲ
14.04.2022	ಮೇಷ	11.01	ಗುರು	14.04.2022	ಬೆಳಿಗ್ಗೆ 7.01ನಿ.ದಿಂದ ಮಧ್ಯಾಹ್ನ 15.01 ನಿ.ದವರೆಗೆ
15.05.2022	ವೃಷಭ	09.26	ರವಿ	15.05.2022	ಸೂರ್ಯೋದಯದಿಂದ ಬೆಳಿಗ್ಗೆ 09.26 ನಿ.ದವರೆಗೆ,
15.06.2022	ಮಿಥುನ	19.30	ಬುಧ	15.06.2022	ಮಧ್ಯಾಹ್ನ 01.06 ನಿ.ದಿಂದ ಸೂರ್ಯಾಸ್ತದವರೆಗೆ
17.07.2022	ಕಟಕ	10.58	ರವಿ	17.07.2022	ಸೂರ್ಯೋದಯದಿಂದ ಬೆಳಿಗ್ಗೆ 10.58 ನಿ.ದವರೆಗೆ,
17.08.2022	ಸಿಂಹ	22.22	ಬುಧ	17.08.2022	ಮಧ್ಯಾಹ್ನ 03.58 ನಿ.ದಿಂದ ಸೂರ್ಯಾಸ್ತದವರೆಗೆ
17.09.2022	ಕನ್ಯಾ	22.49	ಶನಿ	17.09.2022	ಮಧ್ಯಾಹ್ನ 04.25 ನಿ.ದಿಂದ ಸೂರ್ಯಾಸ್ತದವರೆಗೆ
18.10.2022	ತುಲಾ	09.26	ಮಂಗ	18.10.2022	ಸೂರ್ಯೋದಯದಿಂದ ಮಧ್ಯಾಹ್ನ3.26 ನಿ.ದವರೆಗೆ,
17.11.2022	ವೃಶ್ಚಿಕ	06.53	ಗುರು	16.11.2022	ಸೂರ್ಯೋದಯದಿಂದ ಬೆಳಿಗ್ಗೆ 6.53 ನಿ.ದವರೆಗೆ,
16.12.2022	ಧನುಷ್	18.40	ಶುಕ್ರ	16.12.2022	ಮಧ್ಯಾಹ್ನ 12.16 ನಿ.ದಿಂದ ಸೂರ್ಯಾಸ್ತದವರೆಗೆ
14.01.2023	ಮಕರ	26.18	ರವಿ	15.01.2023	ಸೂರ್ಯೋದಯದಿಂದ ಮಧ್ಯಾಹ್ನ2.18 ನಿ.ದವರೆಗೆ,
13.02.2023	ಕುಂಭ	13.03	ಸೋಮ	13.02.2023	ಸೂರ್ಯೋದಯದಿಂದ ಮಧ್ಯಾಹ್ನ1.03 ನಿ.ದವರೆಗೆ,
15.03.2023	ಮೀನ	08.44	ಬುಧ	15.03.2023	ಬೆಳಿಗ್ಗೆ 8.44 ನಿ.ದಿಂದ ಮಧ್ಯಾಹ್ನ3.08 ನಿ.ದವರೆಗೆ,

ಶ್ರೀ ಶುಭಕೃತ್‌ನಾಮ ಸಂವತ್ಸರದಲ್ಲಿ ಬರುವ ಹಬ್ಬಗಳು

ಚಾಂದ್ರಮಾನಯುಗಾದಿ –	02.04.2022
ಚೈತ್ರಗೌರೀವ್ರತ –	04.04.2022
ಶ್ರೀರಾಮನವಮೀ –	10.04.2022
ಚಿತ್ರಾಪೂರ್ಣಿಮಾ, ಹಂಪಿ ರಥೋತ್ಸವ –	16.04.2022
ಅಕ್ಷಯತದಿಗೆ –	03.05.2022
ನರಸಿಂಹಜಯಂತೀ –	14.05.2022
ದೀಪಸ್ತಂಭಗೌರೀವ್ರತ –	28.07.2022
ನಾಗಚತುರ್ಥಿ –	01.08.2022
ನಾಗಪಂಚಮೀ–ಋಗ್ವೇದ ಉಪಾಕರ್ಮ–	02.08.2022
ವರಮಹಾಲಕ್ಷ್ಮೀವ್ರತ –	05.08.2022
ಯಜುರ್ವೇದ ಉಪಾಕರ್ಮ–	11.08.2022
ಶ್ರೀರಾಘವೇಂದ್ರಗುರುಸೌರ್ವಭೌಮರ ಆರಾಧನೆ	12,13,14,08.22
ಶ್ರೀಕೃಷ್ಣ ಜನ್ಮಾಷ್ಟಮೀ	19.08.2022
ಸ್ವರ್ಣಗೌರೀವ್ರತ–	30.08.2022
ಗಣೇಶಚತುರ್ಥೀ –	31.08.2022
ಋಷಿ ಪಂಚಮೀ –	01.09.2022
ಅನಂತಚತುರ್ದಶೀ –	09.09.2022
ಶರನ್ನವರಾತ್ರೀ ಆರಂಭ –	26.09.2022
ಸರಸ್ವತೀ ಆವಾಹನೆ –	02.10.2022
ಸರಸ್ವತೀ ಪೂಜೆ, ದುರ್ಗಾಷ್ಟಮೀ –	03.10.2022
ಮಹಾನವಮೀ–	04.10.2022
ವಿಜಯದಶಮೀ, ಮಧ್ವಜಯಂತೀ –	05.10.2022
ನೀರು ತುಂಬುವ ಹಬ್ಬ–	23.10.2022
ನರಕಚತುರ್ದಶೀ–ಧನಲಕ್ಷ್ಮೀಪೂಜಾ,	24.10.2022
ದೀಪಾವಲೀ ಅಮಾವಾಸ್ಯೆ –	25.10.2022
ಬಲಿಪಾಡ್ಯ –	26.10.2022
ಉತ್ಥಾನದ್ವಾದಶೀ, ತುಳಸೀವಿವಾಹ –	05.11.2022
ಹನುಮದ್ವ್ರತ –	05.12.2022
ಮಕರಸಂಕ್ರಮಣ –	15.01.2023
ರಥಸಪ್ತಮೀ –	28.01.2023
ಭೀಷ್ಮಾಷ್ಟಮೀ–	29.01.2023
ಮಧ್ವನವಮೀ –	30.01.2023
ಭಾರತ ಹುಣ್ಣಿಮೆ, ಬಳ್ಳಾರಿ ರಥ	05.02.2023
ಮಹಾಶಿವರಾತ್ರಿ–	18.02.2023
ಕಾಮದಹನ –	06.03.2023
ಹೋಳಿಹುಣ್ಣಿಮೆ –	07.03.2023

ಪ್ರತಿನಿತ್ಯ ಹೋರಾಧಿಪತಿಗಳನ್ನು ತಿಳಿಯುವ ಕೋಷ್ಟಕ

ಘಂಟೆ	ಭಾನು	ಸೋಮ	ಮಂಗ	ಬುಧ	ಗುರು	ಶುಕ್ರ	ಶನಿ
6–7	ರವಿ	ಚಂದ್ರ	ಮಂಗ	ಬುಧ	ಗುರು	ಶುಕ್ರ	ಶನಿ
7–8	ಶುಕ್ರ	ಶನಿ	ರವಿ	ಚಂದ್ರ	ಮಂಗ	ಬುಧ	ಗುರು
8–9	ಬುಧ	ಗುರು	ಶುಕ್ರ	ಶನಿ	ರವಿ	ಚಂದ್ರ	ಮಂಗ
9–10	ಚಂದ್ರ	ಮಂಗ	ಬುಧ	ಗುರು	ಶುಕ್ರ	ಶನಿ	ರವಿ
10–11	ಶನಿ	ರವಿ	ಚಂದ್ರ	ಮಂಗ	ಬುಧ	ಗುರು	ಶುಕ್ರ
11–12	ಗುರು	ಶುಕ್ರ	ಶನಿ	ರವಿ	ಚಂದ್ರ	ಮಂಗ	ಬುಧ
12–13	ಮಂಗ	ಬುಧ	ಗುರು	ಶುಕ್ರ	ಶನಿ	ರವಿ	ಚಂದ್ರ
13–14	ರವಿ	ಚಂದ್ರ	ಮಂಗ	ಬುಧ	ಗುರು	ಶುಕ್ರ	ಶನಿ
14–15	ಶುಕ್ರ	ಶನಿ	ರವಿ	ಚಂದ್ರ	ಮಂಗ	ಬುಧ	ಗುರು
15–16	ಬುಧ	ಗುರು	ಶುಕ್ರ	ಶನಿ	ರವಿ	ಚಂದ್ರ	ಮಂಗ
16–17	ಚಂದ್ರ	ಮಂಗ	ಬುಧ	ಗುರು	ಶುಕ್ರ	ಶನಿ	ರವಿ
17–18	ಶನಿ	ರವಿ	ಚಂದ್ರ	ಮಂಗ	ಬುಧ	ಗುರು	ಶುಕ್ರ
ಘಂಟೆ	**ಭಾನು**	**ಸೋಮ**	**ಮಂಗ**	**ಬುಧ**	**ಗುರು**	**ಶುಕ್ರ**	**ಶನಿ**
18–19	ಗುರು	ಶುಕ್ರ	ಶನಿ	ರವಿ	ಚಂದ್ರ	ಮಂಗ	ಬುಧ
19–20	ಮಂಗ	ಬುಧ	ಗುರು	ಶುಕ್ರ	ಶನಿ	ರವಿ	ಚಂದ್ರ
20–21	ರವಿ	ಚಂದ್ರ	ಮಂಗ	ಬುಧ	ಗುರು	ಶುಕ್ರ	ಶನಿ
21–22	ಶುಕ್ರ	ಶನಿ	ರವಿ	ಚಂದ್ರ	ಮಂಗ	ಬುಧ	ಗುರು
22–23	ಬುಧ	ಗುರು	ಶುಕ್ರ	ಶನಿ	ರವಿ	ಚಂದ್ರ	ಮಂಗ
23–24	ಚಂದ್ರ	ಮಂಗ	ಬುಧ	ಗುರು	ಶುಕ್ರ	ಶನಿ	ರವಿ
24–1	ಶನಿ	ರವಿ	ಚಂದ್ರ	ಮಂಗ	ಬುಧ	ಗುರು	ಶುಕ್ರ
1–2	ಗುರು	ಶುಕ್ರ	ಶನಿ	ರವಿ	ಚಂದ್ರ	ಮಂಗ	ಬುಧ
2–3	ಮಂಗ	ಬುಧ	ಗುರು	ಶುಕ್ರ	ಶನಿ	ರವಿ	ಚಂದ್ರ
3–4	ರವಿ	ಚಂದ್ರ	ಮಂಗ	ಬುಧ	ಗುರು	ಶುಕ್ರ	ಶನಿ
4–5	ಶುಕ್ರ	ಶನಿ	ರವಿ	ಚಂದ್ರ	ಮಂಗ	ಬುಧ	ಗುರು
5–6	ಬುಧ	ಗುರು	ಶುಕ್ರ	ಶನಿ	ರವಿ	ಚಂದ್ರ	ಮಂಗ

॥ ಶ್ರೀ ಶುಭಕೃತ್ ಸಂವತ್ಸರದ ವಾರ್ಷಿಕ ಫಲ ॥

ಈ ಶುಭಕೃತ್ ನಾಮ ಸಂವತ್ಸರದಲ್ಲಿ ಶನಿಯು ರಾಜನಾಗಿರುವುದರಿಂದ ದೇಶದ ಕೆಲವೆಡೆ ಮಳೆ ಬೀಳುವುದರಿಂದ ತೀವ್ರತರ ರೋಗಗಳಿಂದ ಜನರಿಗೆ ಪೀಡೆ, ಗುರು ಮಂತ್ರಿಯಾಗಿರುವುದರಿಂದ ಸುವರ್ಣ, ಧಾನ್ಯಗಳ ಬೆಲೆಯಲ್ಲಿ ಏರಿಳಿತವಿರುತ್ತದೆ. ಪ್ರಜೆಗೆಳೆಲ್ಲರೂ ಪರದಾಡುವರು. ಬ್ರಾಹ್ಮಣರು ಸಂತುಷ್ಟರಾಗಿರುತ್ತಾರೆ. ಶುಭಗ್ರಹರಿಗೆ ಹೆಚ್ಚಿನ ಅಧಿಕಾರವಿದೆ. ಅಶುಭಗ್ರಹರಿಗೆ ಹೆಚ್ಚಿನ ಅಧಿಕಾರವಿಲ್ಲ. ಲೋಕದಲ್ಲಿ ವೃಷ್ಟಿಯು ಕಡಿಮೆಯಾದರೂ ಹಾಗೂ ಸಸ್ಯಧಾನ್ಯಗಳು ಅಲ್ಪಫಲಿಸಿದರೂ ದೈವಾನುಗ್ರಹದಿಂದ ಪ್ರಜೆಗಳಿಗೆ ಸುಖಶಾಂತಿಗಳು ಲಭಿಸುತ್ತವೆ. ರಸಾಧಿಪತಿ ಕುಜನಾಗಿರುವುದರಿಂದ ಅಲ್ಪವೃಷ್ಟಿ. ಧಾನ್ಯಾಧಿಪ ಶುಕ್ರನಾಗಿರುವುದರಿಂದ ಬಿಳಿಧಾನ್ಯಗಳು ವೃದ್ಧಿಯಾಗುವುದು. ಅರ್ಘಾಧಿಪತಿ ಬುಧನಿಂದ ಮಳೆಯಾಗಿ ಬಹು ಧಾನ್ಯಗಳು ಬೆಳೆದು ಪ್ರಜೆಗಳು ಸುಖವಾಗಿ ಜೀವಿಸುವರು.

ಪುಷ್ಯಾರ್ಕ ಯೋಗ		ಗುರು ಪುಷ್ಯಯೋಗ
10–04–2022	08–01–2023	28–07–2022
08–05–2022	05–02–2023	25–08–2022

13.04.2022 ಪ್ರಣೀತಾನದಿಯಲ್ಲಿ ಪುಷ್ಕರ ಪ್ರಾರಂಭ.

ಏಕಾದಶೀ ದಿನಗಳು

ಶುಕ್ಲ ಏಕಾದಶೀ	ಕೃಷ್ಣ ಏಕಾದಶೀ
12-04-2022	27-04-2022
12-05-2022	26-05-2022
11-06-2022	24-06-2022
10-07-2022	24-07-2022
08-08-2022	23-08-2022
07-09-2022	21-09-2022
06-10-2022	21-10-2022
04-11-2022	20-11-2022
04-12-2022	19-12-2022
02-01-2023	18-01-2023
01-02-2023	16-02-2023
03-03-2023	18-03-2023

ಮಳೆ ನಕ್ಷತ್ರ ನೋಡುವ ಚಕ್ರ

ದಿನಾಂಕ	ನಕ್ಷತ್ರ	ಗಂ–ನಿ	ಚಂ–ನಕ್ಷತ್ರ	ಪು–ಸ್ತ್ರೀ	ರ ಚಂ	ಪತನ–ವಾಸ	ವೃಷ್ಟಿಫಲ
14.04.2022	ಅಶ್ವಿ	11 01	ಉಫ	ಪು ಸ್ತ್ರೀ	ಚಂ ಸೂ	ಸಮುದ್ರ–ಹೂಗಾರ	ಅತಿ
27.04.2022	ಭರ	27 18	ಉಭಾ	ಪು ಪು	ಚಂ ಚಂ	ಸಮುದ್ರ–ಹೂಗಾರ	ಅತಿ
11.05.2022	ಕೃತ್ತಿ	22 17	ಉಫ	ಪು ಸ್ತ್ರೀ	ಚಂ ಸೂ	ತಟ–ರಜಕ	ಸುವೃ
25.05.2022	ರೋಹಿ	19 44	ಉಭಾ	ಪು ಪು	ಸೂ ಚಂ	ಸಂಧಿ–ವೈಶ್ಯ	ಖಂಡ
8.06.2022	ಮೃಗ	19 12	ಉಫ	ಪು ಸ್ತ್ರೀ	ಸೂ ಸೂ	ಪರ್ವತ–ಕುಂಬಾರ	ತುಷಾರ
22.06.2022	ಆರ್ದ್ರಾ	20 06	ರೇವ	ಸ್ತ್ರೀ ಪು	ಚಂ ಚಂ	ಸಂಧಿ–ವೈಶ್ಯ	ಖಂಡ
6.07.2022	ಪುನ	21 48	ಹಸ್ತಾ	ಸ್ತ್ರೀ ಸ್ತ್ರೀ	ಚಂ ಸೂ	ತಟ–ರಜಕ	ಸುವೃ
20.07.2022	ಪುಷ್ಯ	23 15	ಅಶ್ವಿ	ಸ್ತ್ರೀ ಪು	ಚಂ ಚಂ	ಸಮುದ್ರ–ಹೂಗಾರ	ಅತಿ
3.08.2022	ಆಶ್ಲೇ	23 40	ಚಿತ್ರಾ	ಸ್ತ್ರೀ ಸ್ತ್ರೀ	ಚಂ ಸೂ	ಸಮುದ್ರ–ಹೂಗಾರ	ಅತಿ
17.08.2022	ಮಘ	22 22	ಅಶ್ವಿ	ಸ್ತ್ರೀ ಪು	ಚಂ ಚಂ	ತಟ–ರಜಕ	ಸುವೃ
31.08.2022	ಪೂಫ	18 51	ಚಿತ್ರಾ	ಸ್ತ್ರೀ ಸ್ತ್ರೀ	ಸೂ ಸೂ	ಸಂಧಿ–ವೈಶ್ಯ	ಖಂಡ
14.09.2022	ಉಫ	12 47	ಭರ	ಸ್ತ್ರೀ ಪು	ಸೂ ಚಂ	ಪರ್ವತ–ಕುಂಬಾರ	ತುಷಾರ
27.09.2022	ಹಸ್ತಾ	27 55	ಚಿತ್ರಾ	ಸ್ತ್ರೀ ಸ್ತ್ರೀ	ಸೂ ಸೂ	ಸಂಧಿ–ವೈಶ್ಯ	ಖಂಡ
11.10.2022	ಚಿತ್ರಾ	16 17	ಅಶ್ವಿ	ಸ್ತ್ರೀ ಪು	ಸೂ ಚಂ	ತಟ–ರಜಕ	ಸುವೃ
